## ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, ಬೆಂಗಳೂರು
## 2015–16ನೇ ಸಾಲಿನ ವಾರ್ಷಿಕ ವರದಿ

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯು ಕರ್ನಾಟಕ ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆಯಾಗಿದೆ. ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ, 1965 ಮತ್ತು ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ನಿಯಮಗಳು 1968 ರಂತೆ, ರಾಜ್ಯದಲ್ಲಿಯ ಸಂಘಟಿತ ಕಾರ್ಮಿಕ ವರ್ಗದವರ ಕಲ್ಯಾಣ ಸಂವರ್ಧನೆಗೊಳಿಸಲು, ಹಣಕಾಸು ನೆರವು ಒದಗಿಸಲು ಮತ್ತು ಚಟುವಟಿಕೆಗಳನ್ನು ನಡೆಸಲು, ಈ ನಿಧಿಯನ್ನು ರಚಿಸಲಾಗಿದೆ.

ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ, 1965 ರ ಪ್ರಕರಣ 4 ಹಾಗೂ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ನಿಯಮಾವಳಿ 1968 ರ ನಿಯಮ 10 ರ ಅನ್ವಯ ಈ ಕೆಳಕಂಡ ಸದಸ್ಯರು/ಪ್ರತಿನಿಧಿಗಳನ್ನು ಒಳಗೊಂಡ ಮಂಡಳಿಯನ್ನು ಸರ್ಕಾರವು ರೂಪಿಸಬಹುದಾಗಿದೆ.

**ಸದಸ್ಯರು**

1) **ಮಾಲೀಕರ ಪ್ರತಿನಿಧಿಗಳು** –4
2) **ಕಾರ್ಮಿಕರ ಪ್ರತಿನಿಧಿಗಳು** –4
3) **ಸ್ವತಂತ್ರ ಸದಸ್ಯರು.** –4
4) **ಸ್ವತಂತ್ರ ಮಹಿಳಾ ಪ್ರತಿನಿಧಿಗಳು**–2

12 ನೇ ಮಂಡಳಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಕಾಇ 44 ಎಲ್ಇಟಿ 2013, ಬೆಂಗಳೂರು, ದಿನಾಂಕ: 19–03–2013 ರಂದು ಪುನರ್ ರಚಿಸಿದೆ (ಕರ್ನಾಟಕ ರಾಜ್ಯ ಪತ್ರ ಅಧಿಕೃತವಾಗಿ ಪ್ರಕಟಿಸಲಾದ ವಿಶೇಷ ಪತ್ರಿಕೆ) ದಿನಾಂಕ: 19–03–2013) ಈ ಮಂಡಳಿಯು ಕೆಳಕಂಡ ಸದಸ್ಯರನ್ನೊಳಗೊಂಡಿದೆ.

### ಸ್ವತಂತ್ರ ಸದಸ್ಯರು

1) ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ್,
ಸನ್ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಹಾಗೂ ಅಧ್ಯಕ್ಷರು
ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, ಬೆಂಗಳೂರು.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಹಾಗೂ ಮಂಡಳಿಯ ಸದಸ್ಯರು, ಕಾರ್ಮಿಕ ಇಲಾಖೆ,
ಕರ್ನಾಟಕ ಸರ್ಕಾರ, ವಿಕಾಸ ಸೌಧ, ಬೆಂಗಳೂರು–1.
3) ಕಾರ್ಮಿಕ ಆಯುಕ್ತರು,
ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು.
4) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಆರ್ಥಿಕ ಇಲಾಖೆ, ರವರ ಪರವಾಗಿ ಶ್ರೀ ರಾಮಚಂದ್ರಯ್ಯ,
ಉಪ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.

## ಮಾಲೀಕರ ಪ್ರತಿನಿಧಿಗಳು

1. ಅಧ್ಯಕ್ಷರು, ಕರ್ನಾಟಕ ಟೆಕ್ಸ್‌ಟೈಲ್ಸ್ ಮಿಲ್ಸ್ ಅಸೋಸಿಯೇಷನ್, ವಸ್ತ್ರ ಭವನ, ನಂ.64, 4ನೇ ಮೇನ್, 18ನೇ ಕ್ರಾಸ್ ಹತ್ತಿರ, ಮಲ್ಲೇಶ್ವರಂ, ಬೆಂಗಳೂರು– 3.
2. ಅಧ್ಯಕ್ಷರ ಪರವಾಗಿ, ವೈಸ್ ಪ್ರೆಸಿಡೆಂಟ್, ಫೆಡರೇಷನ್ ಆಫ್ ಕರ್ನಾಟಕ ಛೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್, ಕೆ.ಜಿ.ರಸ್ತೆ, ಬೆಂಗಳೂರು.
3. ಅಧ್ಯಕ್ಷರು, ಕರ್ನಾಟಕ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಅಸೋಸಿಯೇಷನ್ (ಕಾಸ್ಸಿಯಾ), 106, 17 ನೇ ಅಡ್ಡ ರಸ್ತೆ, ಮಾಗಡಿ ಕಾರ್ಡ್ ರಸ್ತೆ, ಬೆಂಗಳೂರು.
4. ಅಧ್ಯಕ್ಷರು, ಬೆಂಗಳೂರು ಛೇಂಬರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ (ಬಿ.ಎಂ.ಸಿ.ಎ.), ಷರೀಫ್ ಛೇಂಬರ್ಸ್, ನಂ.14, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು–52.

## ಕಾರ್ಮಿಕರ ಪ್ರತಿನಿಧಿಗಳು:

1. ಅಧ್ಯಕ್ಷರು, ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್, ನಂ.6, ಶಿರೂರು ಪಾರ್ಕ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು–20.
2. ಅಧ್ಯಕ್ಷರು, ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್, "ಸೂರಿ ಭವನ", 16 ನೇ ಕ್ರಾಸ್, 2ನೇ ಬಿ' ಮುಖ್ಯ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು–27.
3. ಅಧ್ಯಕ್ಷರು, ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಇಂಟೆಕ್), ನಂ. 26/1, 11ನೇ ಕ್ರಾಸ್, 8ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–03.
4. ಅಧ್ಯಕ್ಷರು, ಭಾರತೀಯ ಮಜ್ದೂರ ಸಂಘ, ನಂ. 458, ಒ.ಟಿ.ಸಿ. ರಸ್ತೆ, ಬೆಂಗಳೂರು–53.

## ಸ್ವತಂತ್ರ ಸದಸ್ಯರು

1) ಶ್ರೀಮತಿ ಭಾರತಿ, ಟಿ.ಜಿ. ಬಡಾವಣೆ, ಎಸ್.ಎಫ್.ಸಿ.ಎಸ್. ಬ್ಯಾಂಕ್ ಬಿಲ್ಡಿಂಗ್, ಹೊಸಕೋಟೆ, ಬೆಂಗಳೂರು.

2) ಶ್ರೀಮತಿ ಪಾರ್ವತಮ್ಮ. ಕೆ, ಕೋಂ ಬಿ.ಆರ್. ನಾಗರಾಜ್, ನಂ.315–ಜೆ, 2ನೇ ಮುಖ್ಯ, ಕಸ್ತೂರಿ ನಗರ, ಈಸ್ಟ್ ಆಫ್ ಎನ್‌ಜಿಇಎಫ್, ಬೆಂಗಳೂರು–43.

**ಮಾನ್ಯ ಕಾರ್ಮಿಕ ರಾಜ್ಯ ಸಚಿವರು** ಮಂಡಳಿಯ **ಅಧ್ಯಕ್ಷರಾಗಿಯೂ** ಮತ್ತು **ಮಂಡಳಿಯ ಕಲ್ಯಾಣ ಆಯುಕ್ತರು ಮುಖ್ಯ ಕಾರ್ಯನಿರ್ವಾಹಣ** ಅಧಿಕಾರಿಯಾಗಿರುತ್ತಾರೆ.

2012–13 ನೇ ಸಾಲಿನಲ್ಲಿ **12ನೇ ಮಂಡಳಿಯನ್ನು ದಿನಾಂಕ 19–3–2013 ರಂದು** ಪುನರ್ ರಚಿಸಿ, ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಕೃತವಾಗಿ ವಿಶೇಷ ಪತ್ರಿಕೆ ದಿನಾಂಕ: 19–03–2013. ರಂದು ಪ್ರಕಟಿಸಲಾಗಿದೆ.

2015–16ನೇ ವರ್ಷದಲ್ಲಿ ದಿನಾಂಕ 29–02–2016 ರಂದು 84ನೇ ಮಂಡಳಿ ಸಭೆ ಹಾಗೂ ದಿನಾಂಕ: 09–03–2016 ರಂದು 85ನೇ ಮಂಡಳಿ ಸಭೆಯನ್ನು ನಡೆಸಲಾಗಿದೆ.

## 2015–16ನೇ ಸಾಲಿನಲ್ಲಿ 84ನೇ ಮಂಡಳಿ ಸಭೆಯಲ್ಲಿ

**ಚರ್ಚಿಸಿ, ನಿರ್ಣಯಿಸಲಾದ ಪ್ರಮುಖ ವಿಷಯಗಳ ವಿವರ:–**

1. **2016–17ನೇ ಸಾಲಿನ ಆಯವ್ಯಯ ಅನುಮೋದನೆ ಬಗ್ಗೆ ಹಾಗೂ 2015–16ನೇ ಸಾಲಿನ (ಏಪ್ರಿಲ್ 2015 ರಿಂದ ಜನವರಿ 2016 ರವರೆಗೆ) ಆಯವ್ಯಯದಲ್ಲಿನ ವಾಸ್ತವಿಕ ವೆಚ್ಚವನ್ನು ಅನುಮೋದಿಸುವ ಬಗ್ಗೆ:**

ಈ ಆದಾಯದಲ್ಲಿ ವೇತನ (ನಿವೃತ್ತಿ ವೇತನ, ವೈದ್ಯಕೀಯ ವೆಚ್ಚ ಮರುಪಾವತಿ, ರಜೆ ನಗದೀಕರಣ) ಕ್ಕಾಗಿ ₹ 3,15,00,000/–, ಯೋಜನೆಗಳ ವೆಚ್ಚ ₹2,50,00,000/– ಸಾಮಾನ್ಯ ಆಡಳಿತ ರೂ.81,83,000/– ಮಂಡಳಿ ನಿರ್ವಹಣೆ ಮತ್ತು ಉಪಕರಣಗಳು ₹5,10,000/– ಮಂಡಳಿಯ ಆಸ್ತಿ ಅಭಿವೃದ್ಧಿ ನಿರ್ವಹಣೆ ₹6,00,00,000/– ಹೀಗೆ ಒಟ್ಟು ₹ 12,51,93,000/–ಗಳು ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ ಎಂದು ಸಭೆಗೆ ತಿಳಿಸಿದರು. ಶ್ರೀ ಶಾಂತಕುಮಾರ್, ಇಂಟಕ್ ಇವರು ಮಾತನಾಡಿ, ಕಳೆದ ವರ್ಷದಲ್ಲಿ ಅಂದಾಜಿಸಲಾದ ಆದಾಯ ಮತ್ತು ವೆಚ್ಚ ಹಾಗೂ ಉಳಿಕೆಯನ್ನು ಪ್ರತ್ಯೇಕವಾಗಿ ತಖ್ತೆಯಲ್ಲಿ ನಮೂದಿಸಿದಾದಲ್ಲಿ ಈ ವರ್ಷದ ಅಂದಾಜು ಆದಾಯ, ವೆಚ್ಚ ಮತ್ತು ಉಳಿಕೆಯನ್ನು ತೀರ್ಮಾನಿಸಲು ಅನುಕೂಲವಾಗುತ್ತಿತ್ತು ಎಂದು ತಿಳಿಸಿದಾಗ, ಕಲ್ಯಾಣ ಆಯುಕ್ತರು ಮಾತನಾಡಿ ಆರ್ಥಿಕ ವರ್ಷ ಇನ್ನೂ ಮುಗಿಯದಿರುವ ಕಾರಣ ಹಾಗೂ ಲೆಕ್ಕ ಪರಿಶೋಧನಾ ವರದಿ ಬಂದಿರುವುದಿಲ್ಲವಾದ್ದರಿಂದ ಆ ರೀತಿ ಪ್ರತ್ಯೇಕವಾಗಿ ತಖ್ತೆಯಲ್ಲಿ ತೋರಿಸಿರುವುದಿಲ್ಲವೆಂದು ತಿಳಿಸಿದಾಗ, ಫೆಬ್ರವರಿ–2016ರವರೆಗಾದರೂ ತಖ್ತೆಯಲ್ಲಿ ತೋರಿಸಲು ಯಾವುದೇ ತೊಂದರೆ ಇರಲಿಲ್ಲವೆಂದು ಹಾಗೂ ಮಧ್ಯಂತರ ವರದಿಯನ್ನು ಪಡೆಯಲು ಯಾವುದೇ ತೊಂದರೆ ಇರಲಿಲ್ಲವೆಂದು ಸಭೆಗೆ ತಿಳಿಸಿದಾಗ, ಅಧ್ಯಕ್ಷರು ಮಧ್ಯಪ್ರವೇಶಿಸಿ ಈ ಬಗ್ಗೆ ನಡವಳಿಯಲ್ಲಿ 2015–16ನೇ ಸಾಲಿಗೆ ಸಂಬಂಧಿಸಿದ ವಿವರಗಳನ್ನು ನಮೂದಿಸುವಂತೆ ಕಲ್ಯಾಣ ಆಯುಕ್ತರಿಗೆ ಸೂಚಿಸಿದರು. ಹಾಗೂ 2016–17ನೇ ಸಾಲಿನ ಅಂದಾಜು ವೆಚ್ಚದ ವಿವರಣಾ ಪಟ್ಟಿಗೆ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

2. (1) **ಕಾರ್ಮಿಕರ ಮಕ್ಕಳಿಗೆ ನೀಡುತ್ತಿರುವ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯವನ್ನು ಹೆಚ್ಚಿಸುವುದು ಹಾಗೂ ಪರಿಷ್ಕರಿಸುವ ಬಗ್ಗೆ.**

ಅಧ್ಯಕ್ಷರು ಸದಸ್ಯರುಗಳ ಕೋರಿಕೆಯನ್ನು ಪರಿಗಣಿಸಿ, ಈ ಕೆಳಕಂಡಂತೆ ನಿರ್ಣಯ ಪ್ರಕಟಿಸಿದರು.

| **ಕ್ರಮ ಸಂಖ್ಯೆ** | **ವ್ಯಾಸಂಗದ ವಿವರಗಳು** | **ಹಾಲಿಪಡೆಯುತ್ತಿರುವ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ (₹ ಗಳಲ್ಲಿ)** | **ಪರಿಷ್ಕೃತ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ (₹ಗಳಲ್ಲಿ)** |
|---|---|---|---|
| 1 | ಪ್ರೌಢಶಾಲೆ (8ನೇ ತರಗತಿಯಿಂದ 10ನೇ ತರಗತಿಯವರೆಗೆ | 1,500/– | 3,000/– |
| 2 | ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ, ಡಿಪ್ಲೋಮಾ, ಐಟಿಐ, ಡಿಇಡಿ, ನರ್ಸಿಂಗ್ ತರಬೇತಿ ಮತ್ತು ಪಿಯುಸಿಗೆ ತತ್ಸಮಾನವಾದ ವ್ಯಾಸಂಗ) | 2,000/– | 4,000/– |
| 3 | ಪದವಿ ವ್ಯಾಸಂಗಕ್ಕೆ | 2,200/– | 5,000/– |
| 4 | ಸ್ನಾತಕೋತ್ತರ ವ್ಯಾಸಂಗಕ್ಕೆ | 3,000/– | 6,000/– |
| 5 | ಮೆಡಿಕಲ್, ಇಂಜಿನಿಯರಿಂಗ್ ವ್ಯಾಸಂಗಕ್ಕೆ | 5,000/– | 10,000/– |

ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯವನ್ನು ಪಡೆಯಲು ಅರ್ಜಿ ಸಲ್ಲಿಸಲು ಹಾಲಿ ಇರುವ ಅರ್ಹತೆಯಾದ ಸಾಮಾನ್ಯವರ್ಗ ಶೇ.50%, ಪ.ಜಾ/ಪ.ಪಂ ಶೇ.45% ಇರುವ ಪದ್ಧತಿಯನ್ನು ತೆಗೆಯಲು ಹಾಗೂ ಹಾಲಿ ಇರುವ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯವನ್ನು ಮೇಲಿನಂತೆ ಪರಿಷ್ಕರಿಸಿ ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

(2) **ಕಾರ್ಮಿಕರಿಗೆ ವೈದ್ಯಕೀಯ ನೆರವು** :

ಹಾಲಿ ಇರುವ ಆರೋಗ್ಯ ತಪಾಸಣೆಗೆ ನಿಗಧಿಪಡಿಸಿದ ಧನಸಹಾಯ ₹200/– ರಿಂದ ₹600/– ಇದ್ದು, ಈ ಮೊತ್ತವು ತುಂಬ ಕಡಿಮೆ ಇರುವುದರಿಂದ ಇದನ್ನು ಪರಿಷ್ಕರಿಸಿ, ಕಾರ್ಮಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಶ್ರೀ ಶಾಂತಕುಮಾರ್, ಇಂಟಕ್ ಹಾಗೂ ಶ್ರೀ ದೇಶಪಾಂಡೆ, ಬಿ.ಎಂ.ಎಸ್. ಇವರು ಅಧ್ಯಕ್ಷರನ್ನು ಕೋರಿದರು. ಇದಕ್ಕೆ ಉಳಿದ ಸದಸ್ಯರು ಧ್ವನಿಗೂಡಿಸಿದರು. ಈ ಬಗ್ಗೆ ಸಮಗ್ರ ಚರ್ಚೆ ನಡೆಸಿ ಈ ಕೆಳಕಂಡಂತೆ ನಿರ್ಣಯಿಸಲಾಯಿತು.

ಕಾರ್ಮಿಕರ ಆರೋಗ್ಯ ತಪಾಸಣೆಗೆ ನಿಗಧಿಪಡಿಸಿದ ಧನಸಹಾಯ ₹200/– ರಿಂದ ₹600/– ಇರುತ್ತದೆ.

ಇದನ್ನು ₹500/– ರಿಂದ ₹1000/– ಎಂದು ಪರಿಷ್ಕರಿಸಿ ಹೆಚ್ಚಿಸಲು ನಿರ್ಣಯಿಸಲಾಯಿತು.

(3) **ಕಾರ್ಮಿಕರು ಮತ್ತು ಅವಲಂಬಿತರಿಗೆ ಗಣಕ ಯಂತ್ರ ತರಬೇತಿ** :

ಹಾಲಿ ಇರುವ ಪದ್ಧತಿಯನ್ನೇ ಉಳಿಸಿಕೊಳ್ಳಲು ನಿರ್ಣಯಿಸಲಾಯಿತು.

(4) **ಅಂಗವಿಕಲ ಕಾರ್ಮಿಕರಿಗೆ ತ್ರಿಚಕ್ರ ಸೈಕಲ್** :

ಅಂಗವಿಕಲ ಕಾರ್ಮಿಕರಿಗೆ ತ್ರಿಚಕ್ರ ಸೈಕಲ್ ಖರೀದಿಸಲು ಹಾಲಿ ₹5,000/–ಗಳ ಧನ ಸಹಾಯವನ್ನು ನೀಡಲಾಗುತ್ತಿದೆ ಎಂದು ಕಲ್ಯಾಣ ಆಯುಕ್ತರು ಸಭೆಗೆ ತಿಳಿಸಿದರು. ಇದಕ್ಕೆ ಸದಸ್ಯರುಗಳಾದ ಶ್ರೀ ಶಾಂತಕುಮಾರ್, ಇಂಟಕ್ ಹಾಗೂ ಶ್ರೀ ನಾಗರಾಜ್, ಎ.ಐ.ಟಿ.ಯು.ಸಿ. ಇವರುಗಳು ಇದು ಅಂಗವಿಕಲರಿಗೆ ನೀಡುತ್ತಿರುವ ಧನಸಹಾಯ ತೀರ ಕಡಿಮೆ ಇದ್ದು, ಇದನ್ನು ಪರಿಷ್ಕರಿಸಿದ್ದಲ್ಲಿ ಅಂಗವಿಕಲ ಕಾರ್ಮಿಕರಿಗೆ ಅನುಕೂಲವಾಗುತ್ತದೆಂದು ಕೋರಿದರು.

ಸಂಬಂಧಿಸಿದಂತೆ ಈ ಕೆಳಕಂಡಂತೆ ನಿರ್ಣಯಿಸಲಾಯಿತು.

ಅಂಗವಿಕಲ ಕಾರ್ಮಿಕರಿಗೆ ತ್ರಿಚಕ್ರ ಸೈಕಲ್ ಖರೀದಿಸಲು ಹಾಲಿ ನೀಡುತ್ತಿರುವ ₹5,000/–ಗಳ ಧನ ಸಹಾಯವನ್ನು ಪರಿಷ್ಕರಿಸಿ ₹7,500/– ಗಳಿಗೆ ಹೆಚ್ಚಿಸಲು ನಿರ್ಣಯಿಸಲಾಯಿತು.

(5) **ಅಂಗವಿಕಲ ಕಾರ್ಮಿಕರಿಗೆ ಕೃತಕ ಅಂಗಸಾಧನ ಖರೀಸಲು ಧನ ಸಹಾಯ**:

ಹಾಲಿ ಇರುವ ಪದ್ಧತಿಯನ್ನೇ ಉಳಿಸಿಕೊಳ್ಳಲು ನಿರ್ಣಯಿಸಲಾಯಿತು.

(6) **ವಾರ್ಷಿಕ ವೈದ್ಯಕೀಯ ತಪಾಸಣೆಯನ್ನು ನಡೆಸುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಧನಸಹಾಯ**:

ವಾರ್ಷಿಕ ವೈದ್ಯಕೀಯ ತಪಾಸಣೆಯನ್ನು ನಡೆಸುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಒಂದು ಸಂಘಟನೆಗೆ ವರ್ಷದಲ್ಲಿ ಒಂದು ಬಾರಿ ಮಾತ್ರ ನೀಡಲಾಗುತ್ತಿರುವ ಧನಸಹಾಯ ಹಾಲಿ ₹20,000/– ಗಳನ್ನು ₹30,000/– ಗಳಿಗೆ ಪರಿಷ್ಕರಿಸಿ ಹೆಚ್ಚಿಸಲು ಹಾಗೂ ವಾರ್ಷಿಕ ಕ್ರೀಡಾ ಚಟುವಟಿಕೆ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಟನೆಗಳಿಗೆ ಹಾಲಿ ಇರುವ ₹40,000/– ಗಳಿಂದ ₹50,000/– ಗಳಿಗೆ ಪರಿಷ್ಕರಿಸಿ ಹೆಚ್ಚಿಸಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**3. ಬಾಗಲಗುಂಟೆಯಲ್ಲಿ ಇರುವ 30 ಗುಂಟೆ ನಿವೇಶನದಲ್ಲಿ ಸಭಾ ಭವನ/ ಸಮುದಾಯ ಭವನ ನಿರ್ಮಿಸುವ ಕಾಮಗಾರಿಗೆ ಕರ್ನಾಟಕ ಗೃಹ ಮಂಡಳಿಯಲ್ಲಿ ಠೇವಣೀಕರಿಸಿರುವ ಬಗ್ಗೆ.**

ಈ ಬಗ್ಗೆ ಸಮಗ್ರವಾಗಿ ಚರ್ಚೆ ನಡೆಸಿ ಬಾಗಲಗುಂಟೆಯಲ್ಲಿರುವ 30 ಗುಂಟೆ ಜಮೀನಿನಲ್ಲಿ ಸಮುದಾಯ ಭವನ ನಿರ್ಮಿಸುವ ಕಾಮಗಾರಿಗೆ ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇಲ್ಲಿ ₹1,67,00,000/– ಗಳನ್ನು ಠೇವಣೀಕರಿಸಿರುವುದನ್ನು ಸಭೆಯು ಅವಲೋಕಿಸಿ ಘಟನೋತ್ತರ ಅನುಮೋದನೆಯನ್ನು ನೀಡಿತು. ಮತ್ತು ಸದರಿ ಕಟ್ಟಡದಲ್ಲಿ ಕಾರ್ಮಿಕರ ತಂಗುವಿಕೆಗೆ 5 ಕೊಠಡಿಗಳನ್ನು ನಿರ್ಮಿಸುವಂತೆ ನಕ್ಷೆ ಬದಲಾಯಿಸಲು ಒಪ್ಪಲಾಯಿತು.

**4. ಶ್ರೀರಂಗಪಟ್ಟಣ ತಾಲೂಕು, ಹೊಂಗಳ್ಳಿ ಗ್ರಾಮ, ಸರ್ವೆ ನಂ. 341 ರಲ್ಲಿರುವ 4 ಎಕರೆ ಜಮೀನಿನಲ್ಲಿ ಸಮುದಾಯ ಭವನ ನಿರ್ಮಿಸುವ ಬಗ್ಗೆ.**

ಶ್ರೀ ನಾಗರಾಜ್, ಕಾರ್ಯದರ್ಶಿ, ಎಐಟಿಯುಸಿ ಇವರು ಶ್ರೀರಂಗಪಟ್ಟಣ ತಾಲೂಕು, ಹೊಂಗಳ್ಳಿ ಗ್ರಾಮದಲ್ಲಿರುವ 4 ಎಕರೆ ಜಮೀನಿನಲ್ಲಿ ಮೊದಲು 1 ಎಕರೆ ಜಾಗದಲ್ಲಿ ಸಮುದಾಯ ಭವನದ ಜೊತೆ ಅತಿಥಿ ಗೃಹವನ್ನು ಕೂಡ ನಿರ್ಮಿಸುವಂತೆ ಕೋರಿದರು. ಈ ಸಮಯದಲ್ಲಿ ಕಲ್ಯಾಣ ಆಯುಕ್ತರು ಸರ್ಕಾರದ ಅಧೀನದಲ್ಲಿ ಬರುವ ಯಾವುದಾದರು ಕಟ್ಟಡ ನಿರ್ಮಿಸುವ ಸಂಸ್ಥೆಯನ್ನು ಗುರುತಿಸಬೇಕಾಗಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು. ಆಗ ಮಾನ್ಯ ಅಧ್ಯಕ್ಷರು ಸಂಸ್ಥೆಯ ಆಯ್ಕೆಯ ಬಗ್ಗೆ ಕಡತವನ್ನು ಸಲ್ಲಿಸುವಂತೆ ಕಲ್ಯಾಣ ಆಯುಕ್ತರಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ಸಭೆಯಲ್ಲಿ ಹಾಜರಿದ್ದ ಸದಸ್ಯರೆಲ್ಲರು ಸರ್ಕಾರದ ಅಧೀನದಲ್ಲಿ ಬರುವ ಕಟ್ಟಡ ನಿರ್ಮಾಣ ಸಂಸ್ಥೆಯನ್ನು ಮಾನ್ಯ ಅಧ್ಯಕ್ಷರೆ ಆಯ್ಕೆ ಮಾಡಬೇಕೆಂದು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**5. ಉತ್ತರ ಕನ್ನಡ ಜಿಲ್ಲೆ ದಾಂಡೇಲಿ ಪಟ್ಟಣದಲ್ಲಿರುವ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ನಿವೇಶನದಲ್ಲಿರುವ ಕಟ್ಟಡ ಕೆಡವಿ ಹೊಸ ಕಟ್ಟಡ ನಿರ್ಮಿಸುವ ಬಗ್ಗೆ.**

ಉತ್ತರ ಕನ್ನಡ ಜಿಲ್ಲೆ ದಾಂಡೇಲಿ ಪಟ್ಟಣದಲ್ಲಿರುವ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ಶಿಥಿಲಾವಸ್ಥೆಯಲ್ಲಿರುವ ಕಟ್ಟಡವನ್ನು ಕೆಡವಿ 18 ಗುಂಟೆ ಜಾಗದಲ್ಲಿ ಸುಸಜ್ಜಿತವಾದ ಸಮುದಾಯ ಭವನ ಹಾಗೂ ಕಛೇರಿ ಸಂಕೀರ್ಣ ಮತ್ತು ಅಥಿತಿ ಗೃಹವನ್ನು ನಿರ್ಮಿಸುವ ಕಾಮಗಾರಿಗೆ ಅಂದಾಜು ದರಪಟ್ಟಿ ಹಾಗೂ ನೀಲಿ ನಕ್ಷೆ ಪಡೆಯಲು ಸರ್ಕಾರದಿಂದ ಮಾನ್ಯತೆ ಪಡೆದ ಯಾವುದಾದರೂ ಕಟ್ಟಡ ನಿರ್ಮಾಣ ಸಂಸ್ಥೆಯನ್ನು ಗುರುತಿಸಿ ಅನುಮೋದಿಸುವ ಬಗ್ಗೆ ಮಾನ್ಯ ಅಧ್ಯಕ್ಷರೆ ನಿರ್ಣಯ ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**6. ರಾಯಚೂರಿನ ನೀಲಕಂಠೇಶ್ವರ ನಗರದಲ್ಲಿರುವ 23 ಗುಂಟೆ ನಿವೇಶನದಲ್ಲಿ ಸಮುದಾಯ ಭವನ ಹಾಗೂ ಕಛೇರಿ ಸಂಕೀರ್ಣದ ಕಟ್ಟಡ ನಿರ್ಮಿಸುವ ಬಗ್ಗೆ.**

ರಾಯಚೂರಿನ ನೀಲಕಂಠೇಶ್ವರ ನಗರದಲ್ಲಿರುವ 23 ಗುಂಟೆ ನಿವೇಶನದಲ್ಲಿ ಸಮುದಾಯ ಭವನ ಹಾಗೂ ಕಛೇರಿ ಸಂಕೀರ್ಣದ ಕಟ್ಟಡ ನಿರ್ಮಿಸುವ ಬಗ್ಗೆ ಶ್ರೀ ನಾಗರಾಜ್, ಎ.ಐಟಿಯುಸಿ ಮಾತನಾಡಿ, ಸಮುದಾಯ ಭವನ ನಿರ್ಮಾಣಕ್ಕೆ ಸರ್ಕಾರದಿಂದ ಅನುದಾನ ಬಿಡುಗಡೆ ಮಾಡಬೇಕೆಂದು ತಿಳಿಸಿದರು. ಇದಕ್ಕೆ ಪೂರಕವಾಗಿ ಶ್ರೀ ದೇಶಪಾಂಡೆ, ಬಿ.ಎಂ.ಎಸ್., ಇವರು ಪ್ರಾಜೆಕ್ಟ್‌ನ ಒಟ್ಟು ಖರ್ಚಿನ ಶೇ.10% ರಷ್ಟಾದರು ಸರ್ಕಾರದಿಂದ ಅನುದಾನ ಕೊಡಿಸುವ ಪ್ರಯತ್ನ ಮಾಡಬೇಕೆಂದು ತಿಳಿಸಿದರು. ಇದಕ್ಕೆ ಅಧ್ಯಕ್ಷರು ರಾಜ್ಯದಲ್ಲಿ ತೀವ್ರ ಬರಗಾಲ ಇರುವುದರಿಂದ ಸಧ್ಯಕ್ಕೆ ಸಾಧ್ಯವಾಗುವುದಿಲ್ಲವೆಂದು ಮುಂದಿನ ಆರ್ಥಿಕ ವರ್ಷದಲ್ಲಿ ಈ ಬಗ್ಗೆ ಪ್ರಯತ್ನಿಸಲಾಗುವುದೆಂದು ಸಭೆಗೆ ತಿಳಿಸಿದರು.

ಮುಂದುವರೆದು ಶ್ರೀ ಮಹಾಂತೇಶ್, ರಾಜ್ಯ ಕಾರ್ಯದರ್ಶಿ, ಸಿಐಟಿಯು, ಇವರು ಮಾತನಾಡಿ, ಮಂಡಳಿಯ ಹಣವನ್ನು ಕಾರ್ಮಿಕ ಕಲ್ಯಾಣ ಯೋಜನೆಗಳಿಗೆ ಮಾತ್ರ ಉಪಯೋಗಿಸಬೇಕೆಂದು ಮಂಡಳಿಯಿಂದ ನಿರ್ಮಿಸುವ ಕಟ್ಟಡ ಮತ್ತು ಸಮುದಾಯ ಭವನಗಳ ಕಾಮಗಾರಿಯ ವೆಚ್ಚವನ್ನು ಸರ್ಕಾರದ ಅನುದಾನ ಪಡೆದು ನಿರ್ಮಿಸಲು ಪ್ರಯತ್ನ ಮಾಡಬೇಕೆಂದು ಕೋರಿದರು. ಇದಕ್ಕೆ ಅಧ್ಯಕ್ಷರು ಮುಂದಿನ ವರ್ಷ ಪ್ರಯತ್ನಿಸೋಣವೆಂದು ಸಭೆಗೆ ತಿಳಿಸಿದರು. ಹಾಗೂ ಸಮುದಾಯ ಭವನ ಹಾಗೂ ಕಛೇರಿ ಸಂಕೀರ್ಣ ಮತ್ತು ಅಥಿತಿ ಗೃಹವನ್ನು ನಿರ್ಮಿಸುವ ಕಾಮಗಾರಿಗೆ ಅಂದಾಜು ದರಪಟ್ಟಿ ಹಾಗೂ ನೀಲಿ ನಕ್ಷೆ ಪಡೆಯಲು ಸರ್ಕಾರದಿಂದ ಮಾನ್ಯತೆ ಪಡೆದ ಯಾವುದಾದರೂ ಕಟ್ಟಡ ನಿರ್ಮಾಣ ಸಂಸ್ಥೆಯನ್ನು ಗುರುತಿಸಿ ಅನುಮೋದಿಸುವ ಬಗ್ಗೆ ಮಾನ್ಯ ಅಧ್ಯಕ್ಷರೆ ನಿರ್ಣಯ ಕೈಗೊಳ್ಳಲು ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**7. ಗದಗದಲ್ಲಿ ನಿರ್ಮಿಸಲಾಗಿರುವ ಸಮುದಾಯ ಭವನದ ಸುತ್ತ ಆವರಣ ಗೋಡೆ ನಿರ್ಮಿಸುವ ಬಗ್ಗೆ.**

ಗದಗದಲ್ಲಿ ನಿರ್ಮಿಸಲಾಗಿರುವ ಸಮುದಾಯ ಭವನದ ಸುತ್ತ ಆವರಣ ಗೋಡೆ ನಿರ್ಮಿಸುವ ಬಗ್ಗೆ ಚರ್ಚೆಯಾಗಿ ಆವರಣ ಗೋಡೆ ನಿರ್ಮಿಸುವ ಕಾಮಗಾರಿಗೆ ಕಡಿಮೆ ದರಪಟ್ಟಿ ನೀಡಿರುವ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, ಉಪ ವಿಭಾಗ, ಗದಗ ಇವರಿಗೆ ₹7.00 ಲಕ್ಷಗಳನ್ನು ಠೇವಣೀಕರಿಸಿ ಸಮುದಾಯ ಭವನದ ಸುತ್ತ ಆವರಣ ಗೋಡೆ ನಿರ್ಮಿಸುವ ಬಗ್ಗೆ ಕ್ರಮವಹಿಸಿ ಆದಷ್ಟು ಬೇಗನೆ ಪ್ರಕ್ರಿಯೆ ಪೂರ್ಣಗೊಳಿಸಲು ಕಲ್ಯಾಣ ಆಯುಕ್ತರಿಗೆ ಅಧ್ಯಕ್ಷರು ಸೂಚಿಸಿದರು. ಇದಕ್ಕೆ ಎಲ್ಲಾ ಸದಸ್ಯರು ಸರ್ವಾನುಮತದಿಂದ ಅನುಮೋದಿಸಿದರು.

**8. ವಿಜಯಪುರ ಸಮುದಾಯ ಭವನಕ್ಕೆ ಲಿಫ್ಟ್ ಅಳವಡಿಸಲು ಹಾಗೂ ಲಿಫ್ಟ್ ರೂಂ ಕಾಮಗಾರಿ ಬಗ್ಗೆ.**

ವಿಜಯಪುರ ಸಮುದಾಯ ಭವನಕ್ಕೆ ಲಿಫ್ಟ್ ಅಳವಡಿಸಲು ಹಾಗೂ ಲಿಫ್ಟ್ ರೂಂ ಕಾಮಗಾರಿ ಬಗ್ಗೆ ಚರ್ಚೆಯಾಗಿ ವಿಜಯಪುರದ ಸಮುದಾಯ ಭವನಕ್ಕೆ ಲಿಫ್ಟ್ ರೂಂ ಹಾಗೂ ಲಿಫ್ಟ್ ಅಳವಡಿಸುವ ಕಾಮಗಾರಿಗೆ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳ ಜಲ ಸಾರಿಗೆ ಇಲಾಖೆ, ವಿಭಾಗ, ವಿಜಯಪುರ ಇವರಿಗೆ ₹23.50 ಲಕ್ಷವನ್ನು ಠೇವಣೀಕರಿಸಲು ಹಾಗೂ ಕಲ್ಯಾಣ ಆಯುಕ್ತರಿಗೆ ಮೆ॥ ಓಟೀಸ್ ಲಿಫ್ಟ್ ಅನ್ನೆ ಅಳವಡಿಸುವಂತೆ ಲೋಕೋಪಯೋಗಿ ಇಲಾಖೆಗೆ ತಿಳಿಸುವಂತೆ, ಮಾನ್ಯ ಅಧ್ಯಕ್ಷರು ಸೂಚಿಸಿದರು. ಇದಕ್ಕೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಸದರಿ ಕಾಮಗಾರಿಗೆ ಠೇವಣೀಕರಿಸುವ ಬಗ್ಗೆ ಸರ್ವಾನುಮತದಿಂದ ನಿರ್ಣಯಿಸಿದರು.

**9. ವಿಜಯಪುರ ಸಮುದಾಯ ಭವನದ 2ನೇ ಮಹಡಿಯಲ್ಲಿ ಬಾಡಿಗೆಯಲ್ಲಿರುವ ಕಾರ್ಮಿಕ ಇಲಾಖೆ, ಕಾರ್ಮಿಕ ಅಧಿಕಾರಿ–1&2 ರವರು ಅಲ್ಯುಮಿನಿಯಂ ಪಾರ್ಟಿಷನ್ ಮಾಡಿಸಿಕೊಡುವಂತೆ ಕೋರಿರುವ ಬಗ್ಗೆ.**

ಇದರ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿ, ಶ್ರೀ ಶಾಂತಕುಮಾರ್, ಇಂಟಕ್ ಮತ್ತು ಶ್ರೀ ನಾಗರಾಜ್ ಎ.ಐ.ಟಿ.ಯು.ಸಿ., ಮತ್ತು ಶ್ರೀ ದೇಶಪಾಂಡೆ, ಬಿ.ಎಂ.ಎಸ್., ಮಾತನಾಡಿ, ಪಾರ್ಟಿಷನ್ ಮಾಡಿದಲ್ಲಿ ಬಾಡಿಗೆಯನ್ನು ಹೆಚ್ಚು ಮಾಡಬೇಕೆಂದು ಇದಕ್ಕೆ ಒಪ್ಪದಿದ್ದಲ್ಲಿ ಅವರಿಗೆ ಬಾಡಿಗೆದಾರರಿಗೆ ಪಾರ್ಟಿಷನ್ ಮಾಡಿಕೊಳ್ಳಲು ತಿಳಿಸಲು ಕೋರಿದರು. ಕಲ್ಯಾಣ ಆಯುಕ್ತರು ಮಾತನಾಡಿ, ಈ ಕಟ್ಟಡವನ್ನು ಕಾರ್ಮಿಕ ಅಧಿಕಾರಿ, ಉಪ ವಿಭಾಗ–1 ಮತ್ತು 2 ಕಛೇರಿಗೆ ನೀಡಲಾಗಿದ್ದು, ಸರ್ಕಾರಿ ಕಛೇರಿಯಾಗಿರುವುದರಿಂದ ಮುಂಗಡವನ್ನು ಸಹ ಪಡೆದಿರುವುದಿಲ್ಲವೆಂದು ತಿಳಿಸಿದರು. ಮಂಡಳಿಯ ಲೆಕ್ಕಾಧಿಕಾರಿಗಳು ಮಧ್ಯ ಪ್ರವೇಶಿಸಿ, ಮಾತನಾಡಿ, ಪೀಣ್ಯದಲ್ಲಿರುವ ಸಮುದಾಯ ಭವನದಲ್ಲಿ ಕಾರ್ಮಿಕ ಇಲಾಖೆಗೆ ಪಾರ್ಟಿಷನ್ ಮಾಡಿ, ಬಾಡಿಗೆಗೆ ನೀಡಲಾಗಿತ್ತು. ಆದರೆ ಇದರ ಬಾಬ್ತು ಇನ್ನು ₹9.00 ಲಕ್ಷಗಳ ಬಾಡಿಗೆ ಮತ್ತು ಪಾರ್ಟಿಷನ್ ವೆಚ್ಚ ಪಾವತಿ ಮಾಡಲು ಬಾಕಿ ಇರುವುದಾಗಿ ಸಭೆಗೆ ತಿಳಿಸಿದಾಗ ಸದಸ್ಯರೆಲ್ಲರು ಬಾಡಿಗೆಯಲ್ಲಿರುವ ಇಲಾಖೆಯ ಪಾರ್ಟಿಷನ್ ಮಾಡಿಕೊಳ್ಳಲು ಸಂಬಂಧಿಸಿದವರಿಗೆ ತಿಳಿಸುವಂತೆ ಮಂಡಳಿ ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

**10. ಮಂಡಳಿಯ ನೌಕರರ ಪಿಂಚಣಿ ನಿಧಿಗೆ ₹5/– ಕೋಟಿ ನಿಶ್ಚಿತ ಠೇವಣಿ ಇರಿಸಿ ಬಡ್ಡಿಯಿಂದ ಬರುವ ಮೊತ್ತವನ್ನು ಪಿಂಚಣಿ ನಿಧಿಗೆ ಉಪಯೋಗಿಸಿಕೊಳ್ಳಲು ಮಂಡಳಿ ಸಭೆಯ ಅನುಮೋದನೆ ಕೋರುವ ಬಗ್ಗೆ.**

ಮಂಡಳಿಯ ನೌಕರರ ಪಿಂಚಣಿ ನಿಧಿಯ ಖಾತೆ ಸಂಖ್ಯೆ 30428018589 ಗೆ ₹5/– ಕೋಟಿಗಳನ್ನು ಪಿಂಚಣಿ ನಿಧಿಯ ಖಾತೆಗೆ ವರ್ಗಾಯಿಸಿ ನಿಶ್ಚಿತ ಠೇವಣಿ ಇರಿಸಿ ಇದರಿಂದ ಬರುವ ಬಡ್ಡಿ ಮೊತ್ತದಿಂದ ಹಾಲಿ ನಿವೃತ್ತರಾಗಿರುವ ಮತ್ತು ಮುಂದೆ ನಿವೃತ್ತರಾಗಲಿರುವ ನೌಕರರಿಗೆ ಪಿಂಚಣಿ ನಿಧಿಗೆ ಉಪಯೋಗಿಸಿಕೊಳ್ಳಲು ಮಂಡಳಿ ಸಭೆಯು ಸರ್ವಾನುಮತದಿಂದ ಒಪ್ಪಿ ಅನುಮೋದಿಸಿತು.

**11. ನಿಜಲಿಂಗಪ್ಪ ಸಿ. ಸಾಗರ, ಗ್ರೂಪ್–ಡಿ, ನೌಕರ ರವರು ದಿನಾಂಕ: 31–10–2015 ರಂದು ಮರಣ ಹೊಂದಿರುತ್ತಾರೆ. ಇವರ ಪತ್ನಿ ಶ್ರೀಮತಿ. ಆಶಾ ನಿಜಲಿಂಗಪ್ಪ ಸಾಗರ ಇವರ ಮಗನಾದ ಮಣಿಕಂಠ ನಿಜಲಿಂಗಪ್ಪ ಸಾಗರ ಇವರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಲು ಕೋರಿರುವ ಬಗ್ಗೆ.**

ನಿಜಲಿಂಗಪ್ಪ ಸಿ. ಸಾಗರ, ಗ್ರೂಪ್–ಡಿ, ನೌಕರ ರವರು ದಿನಾಂಕ: 31–10–2015 ರಂದು ಮರಣ ಹೊಂದಿರುತ್ತಾರೆ. ಇವರ ಪತ್ನಿ ಶ್ರೀಮತಿ. ಆಶಾ ನಿಜಲಿಂಗಪ್ಪ ಸಾಗರ ಇವರ ಮಗನಾದ ಮಣಿಕಂಠ ನಿಜಲಿಂಗಪ್ಪ ಸಾಗರ ಇವರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ಬಗ್ಗೆ ಚರ್ಚಿಸುವಾಗ ಮಂಡಳಿಯ ಸದಸ್ಯರಾದ ಶ್ರೀ ನಾಗರಾಜು, ಎಐಟಿಯುಸಿ, ರವರು ಈ ಹಿಂದೆಯೆ ಕರ್ತವ್ಯದಲ್ಲಿದ್ದು ನಿಧನ ಹೊಂದಿದ್ದ ಸಂದರ್ಭದಲ್ಲಿ ಅವರ ಅವಲಂಬಿತರಿಗೆ ಅನುಕಂಪದ ಮೇಲೆ ಕೆಲಸವನ್ನು ನೀಡುವ ಬಗ್ಗೆ 82ನೇ ಮಂಡಳಿ ಸಭೆಯಲ್ಲಿ ನಿರ್ಣಯಿಸಲಾಗಿದೆ. ಆದ್ದರಿಂದ ಮೊದಲು ಅನುಕಂಪದ ಆಧಾರದ ಮೇಲೆ ಹುದ್ದೆಯನ್ನು ನೀಡಿ ನಂತರ ಮಂಡಳಿ ಸಭೆಗೆ ಘಟನೋತ್ತರ ಮಂಜೂರಾತಿಗೆ ಮಂಡಿಸಬಹುದಾಗಿದೆ ಎಂದು ವಿಷಯ ಪ್ರಸ್ತಾಪಿಸಿದಾಗ ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರನೊಳಗೊಂಡಂತೆ ಸದಸ್ಯರೆಲ್ಲರು ಒಪ್ಪಿಗೆ ಸೂಚಿಸಿದರು. ತದನಂತರ ಮೃತ ನಿಜಲಿಂಗಪ್ಪ ಎಸ್ ಸಾಗರ, ಗ್ರೂಪ್–ಡಿ ನೌಕರ ಇವರ ಪತ್ನಿ ಶ್ರೀಮತಿ ಆಶಾ ನಿಜಲಿಂಗಪ್ಪ ಸಾಗರ ಇವರ ಮಗನಾದ ಮಣಿಕಂಠ ನಿಜಲಿಂಗಪ್ಪ ಸಾಗರ ಇವರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಸದಸ್ಯರೆಲ್ಲರೂ ಸರ್ವಾನುಮತದಿಂದ ನಿರ್ಣಯಿಸಿದರು.

**12. ಮಂಡಳಿಯಲ್ಲಿ ಖಾಲಿಯಿರುವ ಮೇಲ್ವಿಚಾರಕರ/ಎ.ದ.ಸ ಹುದ್ದೆಗಳಿಗೆ ಗ್ರೂಪ್ 'ಡಿ' ನೌಕರರಿಗೆ ಮುಂಬಡ್ತಿ ನೀಡುವ ಬಗ್ಗೆ**

ಮಂಡಳಿಯಲ್ಲಿ ಖಾಲಿಯಿರುವ ಮೇಲ್ವಿಚಾರಕರ/ಎ.ದ.ಸ ಹುದ್ದೆಗಳಿಗೆ ಗ್ರೂಪ್ 'ಡಿ' ನೌಕರರಿಗೆ ಮುಂಬಡ್ತಿ ನೀಡುವ ಬಗ್ಗೆ ಕಲ್ಯಾಣ ಆಯುಕ್ತರು ವಿಷಯ ಪ್ರಸ್ತಾಪಿಸಿ, ಮಂಡಳಿ ವೃಂದ ಮತ್ತು ನೇಮಕಾತಿಯಲ್ಲಿ ಶೇ. 75% ರಷ್ಟು ನೇರ ನೇಮಕಾತಿ, ಶೇ.25% ರಷ್ಟು ಸೇವೆಯಲ್ಲಿ ಇರುವವರಿಗೆ ಅರ್ಹ ಸಿಬ್ಬಂದಿಗೆ ಭಡ್ತಿ ಹಾಗೂ ಪದೋನ್ನತ್ತಿ ನೀಡುವ ಪದ್ಧತಿ ಇರುತ್ತದೆಂದು ಈ ಕ್ರಮವನ್ನು ಅನುಸರಿಸಲಾಗುತ್ತಿದೆಯೆಂದು ಸಭೆಗೆ ತಿಳಿಸಿದರು. ಒಂದು ಡಾಟಾ ಎಂಟ್ರಿ ಅಪರೇಟರ್ ಅನ್ನು ನೇರ ನೇಮಕಾತಿ ಮಾಡಿಕೊಂಡಿರುವ ಬಗ್ಗೆ ಲೆಕ್ಕ ಪರಿಶೋಧಕರು ಆಕ್ಷೇಪಣೆ ಎತ್ತಿರುತ್ತಾರೆಂದು ಸಭೆಗೆ ತಿಳಿಸಿದರು. ಈ ಸಂಬಂಧ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುವ ಸಲುವಾಗಿ, ಸಿ ಅಂಡ್ ಆರ್ ನಿಯಮಗಳನ್ನು ರೂಪಿಸಿ, ನೇಮಕಾತಿ ಮಾಡಿಕೊಂಡಲ್ಲಿ ಈ ರೀತಿಯ ಆಕ್ಷೇಪಣೆಗಳು ಬರುವುದಿಲ್ಲವೆಂದು ಸದಸ್ಯರು ಸಭೆಗೆ ತಿಳಿಸಿದರು. ಈ ಸಂಬಂಧ ಮಾನ್ಯ ಅಧ್ಯಕ್ಷರು ಸಿ&ಆರ್ ಗೆ ತಿದ್ದುಪಡಿ ಮಾಡಲು ಮಂಡಳಿಯ ಮೂರು ಸದ್ಯಸರನ್ನೊಳಗೊಂಡ ಒಂದು ಉಪ ಸಮಿತಿಯನ್ನು ರಚಿಸಿ ವೃಂದ ಮತ್ತು ನೇಮಕಾತಿ ತಿದ್ದುಪಡಿಗೆ ಈ ಹುದ್ದೆಯನ್ನು ಸೇರಿಸಿ ಸರ್ಕಾರಕ್ಕೆ ಕಳುಹಿಸಲು ಕಲ್ಯಾಣ ಆಯುಕ್ತರಿಗೆ ಸೂಚಿಸಿದರು. ಇದನ್ನು ಸಭೆಯಲ್ಲಿದ್ದ ಸದಸ್ಯರೆಲ್ಲರು ಸರ್ವಾನುಮತದಿಂದ ಅನುಮೋದಿಸಿದರು.

13. ಶ್ರೀ. ಎನ್. ಸಂಪತ್ ಕುಮಾರ್, ಪ್ರ.ದ.ಸ, ಅನ್ಯ ಕಾರ್ಯ ನಿಮಿತ್ತ ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಹಾಗೂ ಅಧ್ಯಕ್ಷರು ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ವಿಧಾನ ಸೌಧ ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು, ವಿಧಾನ ಸಭೆಯ ಅಧಿವೇಶನ ನಡೆದ ಸಮಯದಲ್ಲಿ ಕಾರ್ಯನಿರ್ವಹಿಸಿದ್ದಕ್ಕೆ ದಿನ ಭತ್ಯೆಯನ್ನು 2013 ರಿಂದ 2015 ರವರೆಗೆ ಮಂಡಳಿಯಿಂದ ನೀಡಲು ಮಾನ್ಯ ಅಧ್ಯಕ್ಷರು ಈಗಾಗಲೇ ಮಂಜೂರು ಮಾಡಿರುವ ಹಾಗೂ ಆಡಿಟ್ ಆಕ್ಷೇಪಣೆ ಆಗಿರುವ ಬಗ್ಗೆ.

ಸರ್ಕಾರದ ಉಪ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಯವರು ಸದರಿ ನೌಕರರು ಖಾಯಂ ನೌಕರರಾಗಿದ್ದು, ಗೌರವಧನ ಮಂಜೂರು ಮಾಡಬಹುದೆಂದು ಅಭಿಪ್ರಾಯ ಪಟ್ಟರು. ಸಭೆಯು ಸರ್ವಾನುಮತದಿಂದ ನಿರ್ಣಯಿಸಿತು.

14. **ಮಂಡಳಿಗೆ ಹೊಸ ಲಾಂಛನ (ಲೋಗೊ) ಅಳವಡಿಸಿಕೊಳ್ಳುವ ಬಗ್ಗೆ.**

ಮಂಡಳಿಗೆ ಹೊಸ ಲಾಂಛನ (ಲೋಗೊ) ಅಳವಡಿಸಿಕೊಳ್ಳುವ ಬಗ್ಗೆ ಈಗ ಬಳಕೆಯಲ್ಲಿರುವ ಕರ್ನಾಟಕ ಸರ್ಕಾರದ ಲಾಂಛನದ ಜೊತೆಗೆ ಕಾರ್ಮಿಕ ಕಲ್ಯಾಣ ಮಂಡಳಿಯು ಅಸ್ತಿತ್ವಕ್ಕೆ ತರಲು ಉದ್ದೇಶಿಸಿರುವ 'ಲೋಗೊ'ವನ್ನು ಅಳವಡಿಸಿಕೊಳ್ಳಲು ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರನೊಳಗೊಂಡಂತೆ ಎಲ್ಲ ಸದಸ್ಯರ ಸಹಮತಿಯೊಂದಿಗೆ ನಿರ್ಣಯಿಸಲಾಯಿತು.

15. **ಮಂಡಳಿಯ ಕಾರ್ಯಕ್ರಮಗಳ ಬಗ್ಗೆ ವ್ಯಾಪಕ ಪ್ರಚಾರ ನೀಡುವ ಬಗ್ಗೆ ಕಾರ್ಮಿಕ ಸಚಿವರು ಕಳುಹಿಸಿದ ಪ್ರಸ್ತಾವನೆ ಬಗ್ಗೆ.**

ಶ್ರೀ ಮಹಂತೇಶ್, ರಾಜ್ಯ ಕಾರ್ಯದರ್ಶಿ, ಸಿ.ಐ.ಟಿ.ಯು ಇವರು ಮಾತನಾಡಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ಯೋಜನೆಗಳ ಸೌಲಭ್ಯಗಳನ್ನು ಕಾರ್ಮಿಕರು ಮತ್ತು ಅವರ ಅವಲಂಬಿತರು ಉಪಯೋಗ ಪಡೆದುಕೊಳ್ಳುವ ದೃಷ್ಠಿಯಿಂದ ಪ್ರಚಾರವನ್ನು ಎನ್.ಜಿ.ಓ, ಕಾರ್ಮಿಕ ಸಂಘ, ಕಾಸಿಯದ ಪ್ರತಿನಿಧಿಗಳ ಸಹಯೋಗದೊಂದಿಗೆ ಮಾಡಿದಲ್ಲಿ ಅತ್ಯಂತ ಪರಿಣಾಮಕಾರಿಯಾಗುತ್ತದೆಂದು ಹಾಗೂ ಮಂಡಳಿಯ ಸದಸ್ಯರುಗಳ ಸಹಕಾರವನ್ನು ಸಹ ಪಡೆದುಕೊಳ್ಳಬೇಕೆಂದು ಕೋರಿದಾಗ, ಅಧ್ಯಕ್ಷರು ಒಪ್ಪಿಗೆ ಸೂಚಿಸಿ, ಸೂಕ್ತ ಗೋಡೆ ಬರಹ/ಟಿನ್ ಬೋರ್ಡ್ 20X10 ಅಡಿ ಅಳತೆಯ ಮಾಹಿತಿ ಪ್ರಚಾರ ಫಲಕ(Hoarding) ವನ್ನು ಅಳವಡಿಸುವುದಕ್ಕೆ ₹ 1.50 ಕೋಟಿಯಿಂದ ₹ 2.00 ಕೋಟಿ ವರೆಗೆ ತಗಲಬಹುದಾದ ಅಂದಾಜು ವೆಚ್ಚವನ್ನು ಭರಿಸುವ ಬಗ್ಗೆ ಕ್ರಮವಹಿಸಲು ಮಾನ್ಯ ಅಧ್ಯಕ್ಷರು ಕಲ್ಯಾಣ ಆಯುಕ್ತರಿಗೆ ಸೂಚಿಸಿದರು. ಇದನ್ನು ಮಂಡಳಿಯ ಸದಸ್ಯರೆಲ್ಲ ಸರ್ವಾನುಮತದಿಂದ ಅನುಮೋದಿಸಿದರು.

16. **ಹಿರಿಯೂರು ತಾಲ್ಲೂಕು ವಾಣಿವಿಲಾಸಪುರದಲ್ಲಿರುವ ಕಾರ್ಮಿಕ ಕಲ್ಯಾಣ ಮಂಡಳಿಯ 3 ಎಕರೆ 30 ಗುಂಟೆ ಜಮೀನಿನಲ್ಲಿ ತಂತಿ ಬೇಲಿ ಹಾಕಲು ಠೇವಣಿ ನೀಡಿದ್ದು ಪೂರ್ಣಗೊಳಿಸಿರುವ ಬಗ್ಗೆ.**

ಹಿರಿಯೂರು ತಾಲ್ಲೂಕು ವಾಣಿವಿಲಾಸಪುರದಲ್ಲಿರುವ ಕಾರ್ಮಿಕ ಕಲ್ಯಾಣ ಮಂಡಳಿಯ 3 ಎಕರೆ 30 ಗುಂಟೆ ಜಮೀನಿನಲ್ಲಿ ತಂತಿ ಬೇಲಿ ಹಾಕಲು ಠೇವಣಿ ನೀಡಿದ್ದ ಕಾಮಗಾರಿಯನ್ನು ಪೂರ್ಣಗೊಳಿಸಿ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಭಾಗ ಚಿತ್ರದುರ್ಗ ರವರು ಹಣ ಬಳಕೆ ಪ್ರಮಾಣ ಪತ್ರವನ್ನು ಕಳುಹಿಸಿರುವುದನ್ನು ಸಭೆಯು ಅವಗಾಹಿಸಿ ಅನುಮೋದಿಸಲಾಯಿತು

**17. ಬಾಗಲಗುಂಟೆ 7 ಎಕರೆ 20 ಗುಂಟೆ ಜಮೀನಿನಲ್ಲಿ ಶುದ್ಧ ನೀರಿನ ಘಟಕ ಸ್ಥಾಪಿಸಲು ಸ್ಥಳವಕಾಶ ನೀಡಲು ಕೋರಿರುವ ಬಗ್ಗೆ.**

ಬಾಗಲಗುಂಟೆ 7 ಎಕರೆ 20 ಗುಂಟೆ ಜಮೀನಿನಲ್ಲಿ ಶುದ್ಧ ನೀರಿನ ಘಟಕ ಸ್ಥಾಪಿಸಲು ಸ್ಥಳವಕಾಶ ನೀಡಲು ಕೋರಿರುವ ಬಗ್ಗೆ ಕಲ್ಯಾಣ ಆಯುಕ್ತರು ವಿಷಯ ಪ್ರಸ್ತಾಪಿಸಿ ಸ್ಥಳೀಯ ಗ್ರಾಮಸ್ಥರು ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ನಂ.14 ರ ಸದ್ಯಸರು ಸಾರ್ವಜನಿಕ ಆರೋಗ್ಯದ

ಹಿತದೃಷ್ಠಿಯಿಂದ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಶುದ್ಧ ನೀರಿನ ಘಟಕವನ್ನು ಸ್ಥಾಪಿಸಲು 30X40 (1200 ಚ.ಅ) ಸ್ಥಳಾವಕಾಶವನ್ನು ನೀಡುವಂತೆ ಕೋರಿರುತ್ತಾರೆ. ಈ ಹಿಂದೆ ದೇವಸ್ಥಾನಕ್ಕೆ ಸ್ಥಳವನ್ನು ನೀಡಲಾಗಿದ್ದು, ಅದರ ಪಕ್ಕಕ್ಕೆ 20X30 (600 ಚ.ಅ) ಜಾಗವನ್ನು ನೀಡುವ ಬಗ್ಗೆ ಸಭೆಯಲ್ಲಿ ಮಂಡಿಸಿದಾಗ ಮಾನ್ಯ ಅಧ್ಯಕ್ಷರು ಕುಡಿಯುವ ನೀರನ್ನು ಕೊಡುವುದು ಒಂದು ಉತ್ತಮ ಕೆಲಸವಾಗಿದ್ದು, 600 ಚ.ಅ ಜಾಗವನ್ನು ನೀಡಬಹುದೆಂದು ತಿಳಿಸಿದರು. ಈ ಸಭೆಯಲ್ಲಿ ಹಾಜರಿದ್ದ ಸದಸ್ಯರೆಲ್ಲಾ ಮಾನ್ಯ ಅಧ್ಯಕ್ಷರ ಸೂಚನೆಯನ್ನು ಒಪ್ಪಿ ಸರ್ವಾನುಮತದಿಂದ ಅನುಮೋದನೆ ನೀಡಿದರು.

**18. ಮಂಡಳಿಯಲ್ಲಿ ಡೇಟಾ ಎಂಟ್ರಿ ಆಪರೇಟರ್ ಆಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ನವೀದಾ ಶಬ್ನಂ ಇವರ ಖಾಯಂಗೆ ಸಂಬಂಧಿಸಿದಂತೆ ಸರ್ಕಾರದಿಂದ ಪತ್ರ ಬಂದಿರುವ ಬಗ್ಗೆ.**

ಮಂಡಳಿಯಲ್ಲಿ ಡೇಟಾ ಎಂಟ್ರಿ ಆಪರೇಟರ್ ಆಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ನವೀದಾ ಶಬ್ನಂ ಇವರ ಖಾಯಂಗೆ ಸಂಬಂಧಿಸಿದಂತೆ ಸರ್ಕಾರದಿಂದ ಪತ್ರ ಬಂದಿರುವ ಬಗ್ಗೆ ಕಲ್ಯಾಣ ಆಯುಕ್ತರು ವಿಷಯ ಪ್ರಸ್ತಾಪಿಸಿದಾಗ ಮಾನ್ಯ ಅಧ್ಯಕ್ಷರು ಸರ್ಕಾರದಿಂದ ಯಾವ ಪತ್ರ ಬಂದಿದೆ ಎಂದು ಕೇಳಿದರು. ಈ ಸಂದರ್ಭದಲ್ಲಿ ಕಲ್ಯಾಣ ಆಯುಕ್ತರು ಪತ್ರವನ್ನು ಸಭೆಯಲ್ಲಿ ಓದಿದರು. ಹೊರ ಗುತ್ತಿಗೆ ಆಧಾರದ ನೇಮಕಾತಿಯು ಕ್ರಮಬದ್ಧವಾದ ನೇಮಕಾತಿಯಾಗಿರುವುದಿಲ್ಲ ಮತ್ತು ಇದು ತಾತ್ಕಾಲಿಕವಾಗಿದ್ದು, ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳಿಗೆ ಹಾಗೂ ನಿಗಧಿಪಡಿಸಿದ ಅವಧಿಗೆ ಮಾತ್ರ ಸೀಮಿತವಾಗಿರುತ್ತದೆಂದು ಸರ್ಕಾರದಿಂದ ಪತ್ರ ಬಂದಿರುವ ವಿಷಯವನ್ನು ಸಭೆಯ ಗಮನಕ್ಕೆ ತಿಳಿಸಿದಾಗ, ಸಿ&ಆರ್ ನಿಯಮವಳಿಗೆ ತಿದ್ದುಪಡಿ ತರಲು ಸರ್ಕಾರಕ್ಕೆ ಕಳುಹಿಸುವಾಗ ಈ ಹುದ್ದೆಯನ್ನು ಸೇರಿಸಿ ತಿದ್ದುಪಡಿ ಮಾಡಿಸುವ ಬಗ್ಗೆ ಕ್ರಮವಹಿಸಬೇಕೆಂದು ಅಧ್ಯಕ್ಷರು ತಿಳಿಸಿದಾಗ ಸದಸ್ಯರೆಲ್ಲರೂ ಸಹಮತ ವ್ಯಕ್ತಪಡಿಸಿದರು. ಅದರಂತೆ ನಿರ್ಣಯಿಸಲಾಯಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:**

1. ಕಲ್ಯಾಣ ಆಯುಕ್ತರು, ಗಣಕ ಯಂತ್ರದಲ್ಲಿ ಕೆಲಸ ನಿರ್ವಹಿಸುತ್ತಿರುವ ಡಿ–ದರ್ಜೆ ನೌಕರರಾದ ಶ್ರೀ ಕಾಂತರಾಜು ರವರಿಗೆ ₹ 1000/– ಗಳನ್ನು ಗೌರವ ಸಂಭಾವನೆ ನೀಡುವ ಬಗ್ಗೆ ವಿಷಯ ಪ್ರಸ್ತಾಪಿಸಿದಾಗ ಶ್ರೀ ಮಹಂತೇಶ್, ರಾಜ್ಯ ಕಾರ್ಯದರ್ಶಿ, ಸಿಐಟಿಯು ಇವರು ಮಾತನಾಡಿ ₹ 1000/– ಗಳ ಬದಲಾಗಿ ಇನ್ನು ಹೆಚ್ಚಿನ ಗೌರವ ಸಂಭಾವನೆ ನೀಡುವುದು ಸೂಕ್ತ ಎಂದು ಸಲಹೆ ನೀಡಿದರು. ಶ್ರೀ ನಾಗರಾಜು, ಎಐಟಿಯುಸಿ ರವರು ಮಾತನಾಡಿ ಸದರಿ ನೌಕರರು ನುರಿತ ನೌಕರರೆಂದು ಪರಿಗಣಿಸಿ ಇನ್ಸೆಂಟಿವ್ ನೀಡುವ ಬಗ್ಗೆ ಯಾವುದೇ ಅಭ್ಯಂತರವಿಲ್ಲವೆಂದು ತಿಳಿಸಿದರು. ಇದಕ್ಕೆ ಉಳಿದ ಸದಸ್ಯರುಗಳು ಮತ್ತು ಅಧ್ಯಕ್ಷರು ಸಹಮತಿ ಸೂಚಿಸಿ ₹1000/– ಗಳನ್ನು ಸದರಿ ನೌಕರರಿಗೆ ನೀಡುವ ಬಗ್ಗೆ ಸರ್ವಾನುಮತದಿಂದ ಸಭೆಯು ಅನುಮೋದಿಸಿತು.

2. ಹೊರ ಗುತ್ತಿಗೆ ಆಧಾರದ ಮೇಲೆ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಡೇಟಾ ಎಂಟ್ರಿ ಆಪರೇಟರ್ ಆಗಿ ಕಳೆದ ಮೂರು ವರ್ಷಗಳಿಂದು, ಕೆಲಸ ನಿರ್ವಹಿಸುತ್ತಿರುವ ಶ್ರೀಮತಿ ಸುನಂದ ರವರು ನೀಡಿರುವ ಮನವಿ ಪತ್ರದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಈ ಬಗ್ಗೆ ಚರ್ಚಿಸಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಹೊರ ಗುತ್ತಿಗೆ ನೌಕರರಿಗೆ ನೀಡುತ್ತಿರುವ ₹ 15,701/- ಮಾಸಿಕ ವೇತನವನ್ನು ಈ ಮಂಡಳಿಯು ನೇಮಿಸಿಕೊಂಡಿರುವ ಏಜೆನ್ಸಿ ಮೂಲಕ ಮಾಸಿಕ ವೇತನವನ್ನು ನೀಡುವಂತೆ ಮಂಡಳಿಯ ಅಧ್ಯಕ್ಷರನೊಳಗೊಂಡಂತೆ ಒಪ್ಪಿ ಅನುಮೋದಿಸಲಾಯಿತು.

3. ಮಾನ್ಯ ಅಧ್ಯಕ್ಷರವರು ಮಂಡಳಿಯ ಸದ್ಯಸರಿಗೆ ಸಿಟ್ಟಿಂಗ್ ಫೀ ಎಷ್ಟು ನೀಡುತ್ತಿರುವುದಾಗಿ ಸಭೆಯಲ್ಲಿ ಕಲ್ಯಾಣ ಆಯುಕ್ತರನ್ನು ಕೇಳಿದಾಗ ಪ್ರತಿ ಸದಸ್ಯರಿಗೆ ₹1200/- ಗಳನ್ನು ನೀಡುತ್ತಿರುವುದಾಗಿ ತಿಳಿಸಿದ್ದಾಗ ಸದಸ್ಯರೆಲ್ಲ ಇದು ಬಹಳ ಕಡಿಮೆಯಾಗಿದ್ದು, ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಸಿಟ್ಟಿಂಗ್ ಫೀಯನ್ನು ಜಾಸ್ತಿ ನೀಡುತ್ತಿದ್ದು, ಅದರಂತೆ ನೀಡುವಂತೆ ಕೋರಿದೆ. ಇದಕ್ಕೆ ಮಾನ್ಯ ಅಧ್ಯಕ್ಷರ ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ನೀಡುತ್ತಿರುವ ಸಿಟ್ಟಿಂಗ್ ಫೀಸ್ ಅನ್ನು ಈ ಮಂಡಳಿಯ ಸದಸ್ಯರಿಗೂ ಈ ಸಭೆಯಿಂದಲೆ ನೀಡುವಂತೆ ಕಲ್ಯಾಣ ಆಯುಕ್ತರಿಗೆ ಸೂಚಿಸಿದರು. ಇದನ್ನು ಸಭೆಯಲ್ಲಿದ್ದ ಸದಸ್ಯರು ಸರ್ವಾನುಮತದಿಂದ ಅನುಮೋದಿಸಿತು.

ಮುಂದುವರೆದು, ಶ್ರೀ ಶಾಂತಕುಮಾರ್, ಇಂಟಕ್ ಇವರು ಮಾತನಾಡಿ, ಶ್ರೀ ಯಶವಂತ್‌ಗೆ ಪದೋನ್ನತಿ ನೀಡಬೇಕು ಕೋರಿದರು. ಆಗ ಕಲ್ಯಾಣ ಆಯುಕ್ತರು ಮಾತನಾಡಿ ಈ ಬಗ್ಗೆ ಕೋರಿಕೆ ಬಂದಿರುವುದಾಗಿ ತಿಳಿಸಿ, ಆದರೆ ಸದರಿಯವರು ಜೇಷ್ಠತಾ ಪಟ್ಟಿ ಪ್ರಕಾರ 3ನೇಯವರಾಗಿರುವುದರಿಂದ ಮಂಡಳಿಯ ನಿಯಮಾವಳಿ ಪ್ರಕಾರ ಪದೋನ್ನತಿ ನೀಡಲು ಅವಕಾಶವಿರುವುದಿಲ್ಲವೆಂದು ತಿಳಿಸಿದರು. ಅಧ್ಯಕ್ಷರು ಮಾತನಾಡಿ ಈ ಬಗ್ಗೆ ಸಿ&ಆರ್ ನಿಯಮಾವಳಿಗಳನ್ನು ರಚಿಸಿದ ನಂತರ ಪದೋನ್ನತಿ ನೀಡೋಣವೆಂದು ಹೇಳಿದರು. ಸದಸ್ಯರಾದ ಶ್ರೀ ನಾಗರಾಜ್, ಎಐಟಿಯುಸಿ ರವರು ಈ ಬಗ್ಗೆ ಸಮಿತಿ ರಚಿಸಲು ಕೋರಿದಾಗ, ಅಧ್ಯಕ್ಷರು ಅನುಮೋದಿಸಿದರು.

ಶ್ರೀ ನಾಗರಾಜ್, ಎಐಟಿಯುಸಿ ಇವರು ಮಾತನಾಡಿ, ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನಸಹಾಯ ₹5,000/- ಇದ್ದು, ಇದನ್ನು ಪಡೆಯಲು ಬೇರೆ ಬೇರೆ ಕಡೆ ಈ ಬಗ್ಗೆ ಧನಸಹಾಯವನ್ನು ಪಡೆದಿರಬಾರದು ಎಂಬ ಷರತ್ತು ಇತ್ತು, ಆದಾಗ್ಯೂ ಅಧ್ಯಕ್ಷರಾದ ತಾವು ಮಂಡಳಿಯಿಂದ ₹5,000/-ಗಳನ್ನು ಮಂಜೂರು ಮಾಡಲು ಅನುಮೋದಿಸಿರುವುದು ತುಂಬಾ ಸಂತೋಷದ ವಿಷಯವಾಗಿರುತ್ತದೆಂದು ತಿಳಿಸಿ ಧನ್ಯವಾದಗಳನ್ನು ತಿಳಿಸಿದರು.

ಶ್ರೀ ಶಾಂತಕುಮಾರ್, ಇಂಟಕ್ ಇವರು ಮಾತನಾಡಿ ಮಂಡಳಿಗೆ ಹೊಸದಾಗಿ ಸಿ&ಆರ್ ನಿಯಮಾವಳಿಗಳನ್ನು ರೂಪಿಸಿ ಅನುಮೋದನೆ ಪಡೆದು ಹೊಸ ನೇಮಕಾತಿಯನ್ನು ಮಾಡಬೇಕೆಂದು ಕೋರಿದರು ಮತ್ತು ಮಂಡಳಿಯ ಸಭೆಗಳಲ್ಲಿ ತೀರ್ಮಾನ ಮಾಡುವ ವಿಷಯಗಳಲ್ಲಿ ತುಂಬಾ ಸಹಕಾರ ನೀಡಿದಿರಿ ಎಂದು ಅಧ್ಯಕ್ಷರಿಗೆ ಧನ್ಯವಾದ ತಿಳಿಸಿದರು.

ಶ್ರೀ ಮಹಂತೇಶ್, ರಾಜ್ಯ ಕಾರ್ಯದರ್ಶಿ, ಸಿ.ಐ.ಟಿ.ಯು ಇವರು ಮಾತನಾಡಿ, ಕಾರ್ಮಿಕ ಕಲ್ಯಾಣ ಯೋಜನೆಗಳನ್ನು ಪರಿಷ್ಕರಿಸಿರುವುದರಿಂದ ಕಾರ್ಮಿಕರಿಗೆ ಹೆಚ್ಚಿನ ಪ್ರಯೋಜನವಾಗಿದೆ ಎಂದು, ನಿರ್ಲಕ್ಷ್ಯಕ್ಕೊಳಗಾದ ಕಾರ್ಮಿಕ ವಲಯಕ್ಕೆ ಸೂಕ್ತವಾಗಿ ಸ್ಪಂದನೆ ಮಾಡಿರುತ್ತಾರೆಂದು ಮತ್ತು ಮುಂದೆಯೂ ಸಹ ಮಾಡುತ್ತಾರೆಂದು ಆಶಿಸುತ್ತೇವೆಂದು ಅಧ್ಯಕ್ಷರಿಗೆ ಧನ್ಯವಾದ ತಿಳಿಸಿದರು.

ಅಧ್ಯಕ್ಷರು ಮಾತನಾಡಿ, ಮಂಡಳಿಯ ಅವಧಿಯು ದಿನಾಂಕ:13–03–2016ಕ್ಕೆ ಅಂತ್ಯವಾಗುತ್ತಿದ್ದು, ಕಳೆದ 2 1/2 ವರ್ಷಗಳಿಂದ ಮಂಡಳಿಯ ಸದಸ್ಯರಾಗಿ ತಾವೆಲ್ಲರೂ ಕಾರ್ಮಿಕ ಕಲ್ಯಾಣ ಯೋಜನೆಗಳನ್ನು ಕಾರ್ಮಿಕರಿಗೆ ತಲುಪಿಸುವ ನಿಟ್ಟಿನಲ್ಲಿ ಹಾಗೂ ಧನಸಹಾಯದ ಮೊತ್ತವನ್ನು ಪರಿಷ್ಕರಿಸಲು ತುಂಬಾ ಸಹಕಾರ ನೀಡಿರುತ್ತೀರೆಂದು, ಆದಕಾರಣ ಈ ಬಗ್ಗೆ ಸಮಯಾವಕಾಶವಿಲ್ಲದೇ ಇರುವುದರಿಂದ, ಮುಂದಿನ ದಿನದಲ್ಲಿ ಕಾರ್ಮಿಕ ಸಂಘದ ಹಿರಿಯ ಪ್ರತಿನಿಧಿಗಳು, ಕಾಸಿಯ ಪ್ರತಿನಿಧಿಗಳು, ಸರ್ಕಾರದಿಂದ ನಾಮನಿರ್ದೇಶನ ಹೊಂದಿರುವ ಎಲ್ಲ ಸದಸ್ಯರುಗಳನ್ನೊಳಗೊಂಡಂತೆ ಅನೌಪಚಾರಿಕ ಸಭೆಯನ್ನು ಕರೆದು ಎಲ್ಲರನ್ನು ಗೌರವಿಸುವ ಸಲುವಾಗಿ ವ್ಯವಸ್ಥೆ ಮಾಡಲು ಕಲ್ಯಾಣ ಆಯುಕ್ತರಿಗೆ ಸೂಚಿಸಿದರು.

## 2015–16ನೇ ಸಾಲಿನಲ್ಲಿ 85ನೇ ಮಂಡಳಿ ಸಭೆಯಲ್ಲಿ ಚರ್ಚಿಸಿ, ನಿರ್ಣಯಿಸಲಾದ ಪ್ರಮುಖ ವಿಷಯಗಳ ವಿವರ:–

1. **ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ ಸೆಕ್ಷನ್ 7(ಕ) ತಿದ್ದುಪಡಿ ಮಾಡಲು ಪುನರ್ ಪ್ರಸ್ತಾವನೆಗೆ ಅನುಮೋದನೆ ಪಡೆಯುವ ಬಗ್ಗೆ.**

ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ ಸೆಕ್ಷನ್ 7(ಕ) ಗೆ ತಿದ್ದುಪಡಿಯ ಪುನರ್ ಪ್ರಸ್ತಾವನೆ ಬಗ್ಗೆ ಶ್ರೀ ನಾಗರಾಜು, ಕಾರ್ಯದರ್ಶಿ, ಎಐಟಿಯುಸಿ ರವರು ಮಾತನಾಡಿ ಈ ಹಿಂದೆ ಮಂಡಳಿ ಸಭೆಯಲ್ಲಿ ಆಗಿರುವ 10:20:10 ರ ಅನುಪಾತದಲ್ಲಿ ಕಾರ್ಯಗತ (implement) ಮಾಡುವಂತೆ ಸಭೆಯಲ್ಲಿ ತಿಳಿಸಿದರು. ಶ್ರೀ ರಾಮಕೃಷ್ಣ ಪೂಂಜಾ, ಅಧ್ಯಕ್ಷರು, ಬಿಎಂಎಸ್ ಹಾಗೂ ಶ್ರೀ ಮಹಂತೇಶ್, ಸಿಐಟಿಯು ರವರು 20:40:20 ರ ಅನುಪಾತದಲ್ಲಿ ಮಾಡಿದರೆ ಕಾರ್ಮಿಕರಿಗೆ ಹೆಚ್ಚಿನ ಹೊರೆ ಬೀಳುತ್ತದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಕಲ್ಯಾಣ ಆಯುಕ್ತರು ವಂತಿಕೆಯನ್ನು ವರ್ಷಕ್ಕೆ ಒಂದು ಬಾರಿ ಮಾತ್ರ ಕಟ್ಟಬೇಕಾಗಿರುತ್ತದೆ ಎಂದು ತಿಳಿಸಿದರು. ನಂತರ ಶ್ರೀ ಶ್ರೀಪ್ರಕಾಶ್, ಕಾಸಿಯಾ ರವರು ಮಾಲೀಕರಿಗೆ ಹೆಚ್ಚಿನ ಹೊರೆ ಬೀಳುವುದಾಗಿ ತಿಳಿಸಿದರು. ಈ ಸಮಯದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು 10:20:10 ರ ಅನುಪಾತವಿದ್ದಲ್ಲಿ ಕಾರ್ಮಿಕರಿಗೆ ಹೆಚ್ಚಿನ ಕಲ್ಯಾಣ ಯೋಜನೆಗಳನ್ನು ನೀಡಲು ಸಾಧ್ಯವಾಗುವುದಿಲ್ಲ ವೆಂದು, ಹಾಗೂ ಮಹಿಳಾ ಕಾರ್ಮಿಕರಿಗೆ ಹೆಚ್ಚಿನ ಕಲ್ಯಾಣ ಯೋಜನೆಗಳನ್ನು ರೂಪಿಸಬೇಕಾಗಿರುತ್ತದೆ ಎಂದು ತಿಳಿಸಿದರು. ದಿನಾಂಕ:04–03–2016 ರಂದು ಮಾನ್ಯ ಕಾನೂನು ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಪರಿಶೀಲನಾ ಸಭೆಯಲ್ಲಿ ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ವಂತಿಕೆಯನ್ನು ಪುನರ್ ಪರಿಶೀಲಿಸಲು ತಿಳಿಸಿರುವುದರಿಂದ ವಂತಿಕೆಯನ್ನು 20:40:20ರ ಅನುಪಾತದಲ್ಲಿ ಪ್ರಸ್ತಾವನೆ ಸಲ್ಲಿಸಲು ಸಲಹೆ ನೀಡಿದರು. ಈ ಸಮಯದಲ್ಲಿ ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಹಾಗೂ ಅಧ್ಯಕ್ಷರವರು ಈಗ ಇರುವ 10:20:10 ರ ಅನುಪಾತದಲ್ಲಿ ಬರುವ ವಂತಿಕೆಯಿಂದ ಕಾರ್ಮಿಕರಿಗೆ ಹೆಚ್ಚಿನ ಯೋಜನೆ ನೀಡಲು ಸಾಧ್ಯವಾಗುವುದಿಲ್ಲ. ಈಗ ಇರುವ ₹6 ರಲ್ಲಿ ಈಗಿನ ಕಾಲದಲ್ಲಿ ಒಂದು ಕಾಫಿ ಕೂಡ ಬರುವುದಿಲ್ಲವೆಂದು ಇದೇ ಆಯವ್ಯಯದ ಅಧಿವೇಶನದಲ್ಲಿ ಈ ಬಿಲ್ಲನ್ನು ತರಲಾಗುವುದು. ಆದ್ದರಿಂದ 20:40:20 ರ ಅನುಪಾತಕ್ಕೆ ತಮ್ಮೆಲ್ಲರ ಸಹಕಾರ ಬೇಕೆಂದು ಕೇಳಿದರು. ಈ ಸಮಯದಲ್ಲಿ ಶ್ರೀ.ಶ್ರೀಪ್ರಕಾಶ್, ಕಾಸಿಯಾ ರವರು ಕಾರ್ಮಿಕರಿಂದ 20 ಮಾಲೀಕರಿಂದ 40 ಸರ್ಕಾರದಿಂದ 40 ನೀಡಿದರೆ ಇನ್ನು ಹೆಚ್ಚಿನ ಯೋಜನೆಯನ್ನು ಕಾರ್ಮಿಕರಿಗೆ ನೀಡಬಹುದಾಗಿದೆ ಎಂದು ತಿಳಿಸಿದಾಗ ಸಭೆಯಲ್ಲಿ ಹಾಜರಿದ್ದ ಸದಸ್ಯರೆಲ್ಲರು ಒಮ್ಮತದಿಂದ ಆಗಬಹುದು ಎಂದು ಧ್ವನಿಗೂಡಿಸಿದರು. ಈ ಸಮಯದಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ಸರ್ಕಾರದಿಂದ 40 ರ ಅನುಪಾತದಲ್ಲಿ ನೀಡುವಂತೆ ಕೋರಿರುತ್ತೀರಿ. ಇದಕ್ಕೆ ಪ್ರಯತ್ನಪಡುವುದಾಗಿ ತಿಳಿಸಿದರು. ನಂತರ ಸಭೆಯು 20:40:20 ರ ಅನುಪಾತದಲ್ಲಿ ತಿದ್ದುಪಡಿ ಮಾಡುವಂತೆ ಅಧ್ಯಕ್ಷರನ್ನೊಳಗೊಂಡಂತೆ ಸದಸ್ಯರೆಲ್ಲರು ಸರ್ವಾನುಮತದಿಂದ ಅನುಮೋದನೆ ನೀಡಿದರು.

2. **ಕಾರ್ಮಿಕರ ಮಕ್ಕಳಿಗೆ ನೀಡುತ್ತಿರುವ ಶೈಕ್ಷಣಿಕ ಪ್ರೋತ್ಸಹ ಧನ ಸಹಾಯವನ್ನು ಪರಿಷ್ಕರಿಸಿ ಹೆಚ್ಚಿಸಲಾಗಿರುವುದನ್ನು ಪುನರ್ ಪರಿಷ್ಕರಿಸುವ ಬಗ್ಗೆ.**

ಕಾರ್ಮಿಕರ ಮಕ್ಕಳಿಗೆ ನೀಡುತ್ತಿರುವ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯವನ್ನು ಪರಿಷ್ಕರಿಸಿ ಹೆಚ್ಚಿಸಲಾಗಿರುವುದನ್ನು ಪುನರ್ ಪರಿಷ್ಕರಿಸುವ ಬಗ್ಗೆ ಸಭೆಯಲ್ಲಿ ಮಂಡಿಸಿದಾಗ ಶ್ರೀ ನಾಗರಾಜ, ಎಐಟಿಯುಸಿ ರವರು 84ನೇ ಮಂಡಳಿ ಸಭೆಯಲ್ಲಿ ನಿರ್ಣಯಿಸಿದಂತೆ ಮುಂದುವರೆಸಲು ತಿಳಿಸಿದರು. ಇದಕ್ಕೆ ಕಲ್ಯಾಣ ಆಯುಕ್ತರು ಕನಿಷ್ಠ ತೇರ್ಗಡೆ ಹೊಂದಿದ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯವನ್ನು ನೀಡಿದರೆ ₹8/– **ರಿಂದ** ₹10/– ಕೋಟಿ ವಂತಿಕೆಯೆಲ್ಲಾ ಈ ಯೋಜನೆಗೆ ಖರ್ಚಾಗುತ್ತದೆ ಎಂದು ಸಭೆಗೆ ತಿಳಿಸಿದರು. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ವರ್ಷಕ್ಕೆ ಬರುವ ವಂತಿಕೆಯನ್ನೆಲ್ಲ ಪೂರ್ಣ ಉಪಯೋಗಿಸಿದರೆ ಮುಂದಿನ ವರ್ಷಗಳಲ್ಲಿ ಮಂಡಳಿಯು ಸಂಕಷ್ಠಕ್ಕೆ ಸಿಲುಕುತ್ತದೆ ಎಂದು ತಿಳಿಸಿದರು. ಕಲ್ಯಾಣ ಆಯುಕ್ತರು 20:40:20 ರ ಅನುಪಾತದಲ್ಲಿ ತಿದ್ದುಪಡಿಯಾದ ನಂತರ 84ನೇ ಮಂಡಳಿ ಸಭೆಯಲ್ಲಿ ಹೆಚ್ಚಿಸಲಾಗಿರುವ ಕಲ್ಯಾಣ ಯೋಜನೆಗಳ ಮೊತ್ತವನ್ನು ನೀಡುವ ಬಗ್ಗೆ ಸಭೆಯಲ್ಲಿ ತಿಳಿಸಿದರು. ಇದಕ್ಕೆ ಸಭೆಯಲ್ಲಿದ್ದ ಸದಸ್ಯರೆಲ್ಲರು 84ನೇ ಮಂಡಳಿ ಸಭೆಯಲ್ಲಿ ಹೆಚ್ಚಿಸಲಾಗಿರುವ ಕಲ್ಯಾಣ ಯೋಜನೆಗಳನ್ನು ಮೊತ್ತವನ್ನು ಮುಂದುವರೆಸುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರನ್ನೊಳಗೊಂಡಂತೆ ಸದಸ್ಯರೆಲ್ಲರು ಒಮ್ಮತದಿಂದ ನಿರ್ಣಯಿಸಲಾಯಿತು.

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು:**

1. ಶ್ರೀ ಶ್ರೀಪ್ರಕಾಶ, ಕಾಸಿಯಾ ರವರು ಸಮುದಾಯ ಭವನ ನಿರ್ಮಿಸುವ ಬದಲು ಕಾರ್ಮಿಕರ ಹೆಣ್ಣುಮಕ್ಕಳಿಗೆ ಪೇಯಿಂಗ್ ಗೆಸ್ಟ್ ನಿರ್ಮಿಸಲು ಸಲಹೆ ನೀಡಿದರು. ಅದಕ್ಕೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ತಮ್ಮ ಸಲಹೆ ಉತ್ತಮವಾಗಿದ್ದು, ಇದನ್ನು ಮುಂದಿನ ಮಂಡಳಿ ಸಭೆಯಲ್ಲಿ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು. ಈ ಸಮಯದಲ್ಲಿ ಶ್ರೀ ನಾಗರಾಜು, ಎಐಟಿಯುಸಿ ರವರು ಇದರ ಜೊತೆ ಕಾರ್ಮಿಕರಿಗೆ ತಂಗುದಾಣವನ್ನು ನಿರ್ಮಿಸುವಂತೆ ಕೋರಿದರು. ಇದಕ್ಕೆ ಅಧ್ಯಕ್ಷರು ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ ತಿದ್ದುಪಡಿಯಾದ ನಂತರ ಇದರ ಬಗ್ಗೆ ಕ್ರಮ ವಹಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದಾಗ ಸದಸ್ಯರೆಲ್ಲಾ ಸರ್ವಾನುಮತದಿಂದ ಅನುಮೋದಿಸಿದರು.

**<u>ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಸಭೆಯ ಸದಸ್ಯರಿಗೆ ಬೀಳ್ಕೊಡುಗೆ:</u>**

ಕಲ್ಯಾಣ ಆಯುಕ್ತರು ಸಭೆಯಲ್ಲಿ ಮಂಡಳಿಯ ಸದಸ್ಯರಾಗಿ ದಿನಾಂಕ; 18–03–2016 ಕ್ಕೆ ಮೂರು ವರ್ಷದ ಅವಧಿ ಪೂರೈಸಿ ನಿವೃತ್ತರಾಗಿರುವ ಮಂಡಳಿಯ ಸದಸ್ಯರಿಗೆ ಮಾನ್ಯ ಅಧ್ಯಕ್ಷರು ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಸನ್ಮಾನಿಸಲು ಒಬ್ಬಬ್ಬ ಸದಸ್ಯರ ಹೆಸರನ್ನು ಕರೆದು ಗೌರವಪೂರ್ವಕವಾಗಿ ಸನ್ಮಾನಿಸಲಾಯಿತು.

1) **ಮಂಡಳಿಯ 78ನೇ ಸಭೆಯ ನಿರ್ಣಯದಂತೆ 2015–16ನೇ ಸಾಲಿಗೆ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಕೆಳಕಂಡಂತೆ ನಿಗದಿ ಪಡಿಸಿದೆ.**

| **ಕ್ರ. ಸಂ** | **ತರಗತಿ** | **ಪರಿಷ್ಕೃತ ಮೊತ್ತ ₹.** |
|---|---|---|
| 1 | ಪ್ರೌಢ ಶಾಲೆ ( 8 ರಿಂದ 10ನೇ ತರಗತಿವರೆಗೆ) | 1,500 |
| 2 | ಪಿ.ಯು.ಸಿ 1 ಮತ್ತು 2 ಟಿ .ಸಿ ಹೆಚ್. (ಡಿ.ಎಡ್) ಡಿಪ್ಲೋಮಾ | 2,000 |
| 3 | ಪದವಿ ತರಗತಿಗಳಿಗೆ | 2,200 |
| 4 | ಸ್ನಾತಕೋತ್ತರ ಪದವಿ | 3,000 |
| 5 | ವೈದ್ಯಕೀಯ ಮತ್ತು ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ | 5,000 |

2) **ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ, 1965 ರ ಅಡಿಯಲ್ಲಿ ಮಂಡಳಿಗೆ 2015–16ನೇ ಸಾಲಿನಲ್ಲಿ ಬಂದಿರುವ ವಂತಿಗೆ ಮತ್ತು ಸಂಪನ್ಮೂಲಗಳ ವಿವರ:–**

| **ಕ್ರ.ಸಂ** | **ವಿವರ ವಂತಿಗೆ** | 2015–16 |
|---|---|---|
| 1. | ಅ) ಕಾರ್ಮಿಕರ ವಂತಿಗೆ | 1,98,14,490 |
| | ಆ) ಮಾಲೀಕರ ವಂತಿಗೆ | 3,96,28,980 |
| | **ಒಟ್ಟು ಮೊತ್ತ** | **5,94,43,470** |
| 2. | ಸರ್ಕಾರದ ಸಮ ಪ್ರಮಾಣದ ಅಂಶಧನ | 2,25,00,000 |
| | **ಒಟ್ಟು** | **8,19,43,470** |

3) **ಕಾರ್ಮಿಕರಿಗೆ ಪಾವತಿಯಾಗದಿರುವ ಅನ್‌ಪೇಯಿಡ್ (ವೇತನ /ಬೋನಸ್) ಮೊತ್ತದ ವಿವರ:–**

| ಕ್ರ.ಸಂ. | ವಿವರ | 2015–16 |
|---|---|---|
| 1. | ಜಮಾ ಆಗಿರುವ ಮೊತ್ತ | 3,22,45,694 |
| 2. | ಕಾರ್ಮಿಕರಿಗೆ ಪಾವತಿಸಿರುವ ಮೊತ್ತ | 2,57,625 |

4) **<u>ಕಲ್ಯಾಣ ಕಾರ್ಯಕ್ರಮಗಳು :–</u>**

| ಕ್ರ.ಸಂ | ವರ್ಷ | 2015–16 | |
|---|---|---|---|
| | | ಅರ್ಹ ಫಲಾನುಭವಿಗಳ ಒಟ್ಟು ಸಂಖ್ಯೆ | ಮೊತ್ತ [illegible]. |
| 1. | ಶೈಕ್ಷಿಣಿಕ ಪ್ರೋತ್ಸಾಹ ಧನ ಸಹಾಯ | 7936 | 1,55,36,000 |
| 2. | ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ | 167 | 8,35,000 |
| 3. | ಕಾರ್ಮಿಕರಿಗೆ ವೈದ್ಯಕೀಯ ನೆರವು | 07 | 66,437 |
| 4. | ವಾರ್ಷಿಕ ಕ್ರೀಡಾ ಚಟುವಟಿಕೆ ಹಮ್ಮಿಕೊಳ್ಳುವ ನೋಂದಾಯಿತ ಕಾರ್ಮಿಕ ಸಂಘಗಳಿಗೆ ಧನ ಸಹಾಯ | 400 (1 ಸಂಘಟನೆ) | 40,000 |
| 5. | ವಾರ್ಷಿಕ ವೈದ್ಯಕೀಯ ತಪಾಸಣೆ ನಡೆಸುವ ಟ್ರೇಡ್ ಯೂನಿಯನ್/ ಸಂಸ್ಥೆಗಳಿಗೆ ಧನ ಸಹಾಯ | 748 (2 ಸಂಘಟನೆ) | 40,000 |
| 6. | 2015–16ನೇ ಸಾಲಿಗೆ ಮಂಡಳಿಯ ಕಲ್ಯಾಣ ಕಾರ್ಯಕ್ರಮಗಳ ಪ್ರಚಾರದ ವೆಚ್ಚ | – | 1,62,150 |
| | **ಒಟ್ಟು** | 9258 | 1,66,79,587 |

**<u>ಮಂಡಳಿಯ 2015–16 ನೇ ಸಾಲಿನ ಜಮಾದ ವಿವರಣಾ ಪಟ್ಟಿ:</u>**

| ಕ್ರ.ಸಂ | ಜಮಾದ ವಿವರ | ಜಮಾ | ಒಟ್ಟು |
|---|---|---|---|

| | | | |
|---|---|---|---|
| 1 | 1) ವಂತಿಗೆ ರೂಪದ ಹಣ<br><br>2) **ಮ್ಯಾಚಿಂಗ್ ವಂತಿಗೆ** 2015ನೇ ಸಾಲಿನ ಸಮ ಪ್ರಮಾಣದ ಅಂಶಧನ)<br><br>3) 2015ನೇ ಸಾಲಿಗೆ ರಾಜ್ಯ ಸರ್ಕಾರದ ಸಹಾಯ ಅನುದಾನ (ವೇತನ) | 59443470<br><br>2,25,00,000<br><br>7,00,000 | 8,26,43,470 |
| 2 | ಕಾರ್ಮಿಕರಿಗೆ ಪಾವತಿಯಾಗದೇ ಉಳಿದಿರುವ ಅನ್‌ಪೇಯ್ಡ್ ಮೊತ್ತ | 32245694 | 32245694 |
| 3 | **<u>ಬಾಡಿಗೆ ಮೂಲದಿಂದ ಜಮಾ</u>**<br><br>ಅ) ಸೆಂಟ್ರಲ್ ವರ್ಕರ್ಸ್ ಎಜುಕೇಷನ್ ಬೋರ್ಡ್ ಇವರಿಂದ ಬಂದ ಬಾಡಿಗೆ. | 8,98,800 | 5242816 |
| | ಆ) ಎಸ್‌ಬಿಐ ಮತ್ತೀಕೆರೆ, ಯಶವಂತಪುರ ಶಾಖೆಯಿಂದ ಬಾಡಿಗೆ | 21,72,685 | |
| | ಇ) ಎ.ಟಿ.ಎಂ. | 1,21,068 | |
| | ಈ) ಪೀಣ್ಯ ಸಮುದಾಯ ಭವನದಿಂದ ಬಂದ ಬಾಡಿಗೆ | 5,04,400 | |
| | ಉ) ಪೀಣ್ಯ ಸಮುದಾಯ ಭವನ ಕಟ್ಟಡದ 1 ಮತ್ತು 2ನೇ ಮಹಡಿಯಿಂದ ಬಂದ ಬಾಡಿಗೆ ಮೊತ್ತ | 7,47,512 | |
| | ಊ) ಬಾಪೂಜಿನಗರ ಸಮುದಾಯ ಭವನದಿಂದ ಬಂದ ಬಾಡಿಗೆ | 4,01,000 | |
| | ಋ) ಬಾಪೂಜಿನಗರ ಕಟ್ಟಡದ ಬಾಡಿಗೆ | – | |
| | ಎ) ವಿಜಯಪುರ ಸಮುದಾಯ ಭವನದಿಂದ ಬಂದ ಬಾಡಿಗೆ | 11,000 | |
| | ಏ) ವಿಜಯಪುರ ಕಟ್ಟಡದ ಬಾಡಿಗೆ (ಉಪ ನಿರ್ದೇಶಕರು ಲೆಕ್ಕ ಪರಿಶೋಧನಾ ಇಲಾಖೆ) | 3,11,451 | |
| | ಐ) ಬಾಗಲಗುಂಟೆ ಜಮೀನಿನಲ್ಲಿರುವ ಶೆಡ್ ಬಾಡಿಗೆ | 54,900 | |
| | ಒ) ದಾವಣಗೆರೆ ಕಾರ್ಮಿಕ ಕಲ್ಯಾಣ ಕೇಂದ್ರದಿಂದ ಬಂದ ಬಾಡಿಗೆ | 20,000 | |

| | | | |
|---|---|---|---|
| 4 | **ಬ್ಯಾಂಕ್ ಖಾತೆಗಳಿಂದ ಬಡ್ಡಿ ಗಳಿಕೆ**<br>ಅ) ನಿಶ್ಚಿತ ಠೇವಣಿ ಮೇಲಿನ ಬಡ್ಡಿ<br>ಆ) ಎಸ್.ಬಿ.ಐ. (ಸಾಮಾನ್ಯ) ಉಳಿತಾಯ<br>ಖಾತೆ ಮೇಲಿನ ಬಡ್ಡಿ | 3,44,10,105<br><br>6,13,030 | 35023135 |
| 5 | **ಜಿ. ಐ. ಎಸ್. ವಂತಿಗೆ**<br>ಅ) ವಿಮಾ ಜಿ.ಐ.ಎಸ್. ಬಾಬ್ತು | 33,400 | 33,400 |
| 6 | ನಿಶ್ಚಿತ ಠೇವಣಿ ಮೊತ್ತ ಹಿಂದಿರುಗಿಸಿದ್ದು | 5,98,00,000 | 5,98,00,000 |
| 7 | ಇತರೆ | 70,08,207 | 70,08,207 |
| | **ಒಟ್ಟು ಮೊತ್ತ** | 22,19,96,722 | 22,19,96,722 |

**ಮಂಡಳಿಯ 2015-16 ನೇ ಸಾಲಿನ ವೆಚ್ಚಗಳ ವಿವರಣಾ ಪಟ್ಟಿ**

| ಕ್ರ.ಸಂ. | ವೆಚ್ಚಗಳ ವಿವರ | ಖರ್ಚು ₹ | ಒಟ್ಟು ₹ |
|---|---|---|---|
| 1. | ವೇತನ<br>1. ಸಿಬ್ಬಂದಿ ವೇತನ<br>2. ನಿವೃತ್ತಿ ವೇತನ<br>3. ವೈದ್ಯಕೀಯ ಮರು ಪಾವತಿ<br>4. ರಜೆ ನಗದೀಕರಣ<br>5. ಹಬ್ಬದ ಮುಂಗಡ | 27417068<br>4040752<br>506174<br>610749<br>40000 | **32614743** |
| 2 | ಕಲ್ಯಾಣ ಯೋಜನೆಗಳು | 1,65,17,437 | **1,65,17,437** |
| 3 | ಸಾಮಾನ್ಯ ವೆಚ್ಚ: | 66,00,306 | **66,00,306** |
| 4. | ಅನ್‌ಕ್ಲೈಮ್ಡ್ ಹಿಂತಿರುಗಿಸಿದ ಮೊತ್ತ | 2,57,625 | **2,57,625** |
| 5. | **ಮಂಡಳಿ ನಿರ್ವಹಣೆ ಮತ್ತು ಉಪಕರಣಗಳು:**<br>1. ಜೆರಾಕ್ಸ್ ಸ್ಟೆನ್ಸಿಲ್ & ಫ್ಯಾಕ್ಸ್ ಮಷೀನ್ ನಿರ್ವಹಣೆ<br>2. ಕಂಪ್ಯೂಟರ್, ಫ್ಯಾಕ್ಸ್ ಖರೀದಿ ನಿರ್ವಹಣ ವೆಚ್ಚ<br>3. ಪೀಠೋಪಕರಣಗಳ ಖರೀದಿ & ದುರಸ್ತಿ<br>4. ಕಛೇರಿ ವಾಹನಕ್ಕೆ ಡೀಸೆಲ್ ಖರೀದಿ & ರಿಪೇರಿ | 40310<br>319944 | **23,79,939** |

| | | | |
|---|---|---|---|
| | | 27675<br><br>1992010 | |
| 6. | ಮಂಡಳಿ ಆಸ್ತಿ ಅಭಿವೃದ್ಧಿಗಾಗಿ ವೆಚ್ಚ | 1,78,12,182 | **1,78,12,182** |
| 7. | **ನಿಶ್ಚಿತ ಠೇವಣಿ ವಿವರ:**<br><br>1. ನಿವೃತ್ತ ವೇತನಕ್ಕಾಗಿ ನಿಶ್ಚಿತ ಠೇವಣಿಯಲ್ಲಿರುವ ಮೊತ್ತ<br>2. ಕಾರ್ಮಿಕರಿಗೆ ಪಾವತಿಯಾಗದ ಅನ್‌ಕ್ಲೇಮ್ಡ್ ಮೊತ್ತವನ್ನು ಕಾರ್ಮಿಕರು ಕ್ಲೈಮ್ ಮಾಡಿದ್ದಲ್ಲಿ ಹಿಂದಿರುಗಿಸಬೇಕಾದ ಮೊತ್ತವನ್ನು ನಿಶ್ಚಿತ ಠೇವಣಿಯಲ್ಲಿಟ್ಟಿರುವ ಮೊತ್ತ<br>3. ನಿಶ್ಚಿತ ಠೇವಣಿಯ ಮೊತ್ತ | 11,00,00,000<br><br>12,00,00,000<br><br>30,00,00,000 | **53,00,00,000** |
| | **ಒಟ್ಟು ವೆಚ್ಚ** | 60,61,82,232 | 60,61,82,232 |

## <u>ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ನೌಕರರ ಪಿಂಚಣಿ ವಿವರ</u>

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ನೌಕರರ ಪಿಂಚಣಿ ನಿಧಿ ಯೋಜನೆಯನ್ನು ದಿ: 31-03-2000 ರಂದು ನಡೆದ ಮಂಡಳಿಯ 55 ನೇ ಸಭೆಯ ನಿರ್ಣಯದಂತೆ, ಸರ್ಕಾರದ ಆದೇಶ ಸಂಖ್ಯೆ: ಕಾಇ 349 ಎಲ್‌ಇಟಿ 2000 ಬೆಂಗಳೂರು ದಿನಾಂಕ 27-06-2001 ರಂತೆ ಜಾರಿಗೆ ಬಂದಿರುತ್ತದೆ.

ಪ್ರಸ್ತುತ 2015-16ನೇ ಸಾಲಿನಲ್ಲಿ 38 ನೌಕರರು ನಿವೃತ್ತಿ ಹೊಂದಿದ್ದು, ಇದರಲ್ಲಿ 30 ನೌಕರರು ಪಿಂಚಣಿ ಪಡೆಯುತ್ತಿದ್ದಾರೆ. ಹಾಗೂ 08 ನೌಕರರಿಗೆ ಕುಟುಂಬ ಪಿಂಚಣಿ ನೀಡಲಾಗುತ್ತಿದೆ.

## <u>2015-16 ನೇ ಸಾಲಿನ ಪಿಂಚಣಿ ನಿಧಿಗೆ ಜಮಾದ ವಿವರ:</u>

| ಕ್ರ.ಸಂ. | ಜಮಾ ವಿವರ | ಮೊತ್ತ |
|---|---|---|
| 1 | 2015–16 ನೇ ಸಾಲಿನ ಮಂಡಳಿ ನೌಕರರ ಮೂಲ ವೇತನದ ಶೇ. 8.33% ಮೊತ್ತವನ್ನು ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ನೌಕರರ ಪಿಂಚಣಿ ನಿಧಿಗೆ ಜಮಾ ಮಾಡಿದೆ. | 20,84,269 |
| | **ಒಟ್ಟು ಮೊತ್ತ ರೂ.** | **20,84,269** |

**ಮಂಡಳಿಯ 2015–16ನೇ ಸಾಲಿನ ಪಿಂಚಣಿ ಮೊತ್ತದ ವೆಚ್ಚಗಳ ವಿವರ:**

| ಕ್ರ.ಸಂ. | ವೆಚ್ಚಗಳ ವಿವರ | ಎಸ್.ಬಿ.ಐ. ಯಶವಂತಪುರ ಶಾಖೆ | ಒಟ್ಟು ಮೊತ್ತ |
|---|---|---|---|
| 1. | ಪಿಂಚಣಿ, ಕುಟುಂಬ ಪಿಂಚಣಿ ಹಾಗೂ ತುಟ್ಟಿಭತ್ಯೆ | 40,40,752 | 40,40,752 |

## 2015–16 ನೇ ಸಾಲಿನ ನಿಶ್ಚಿತ ಠೇವಣಿ ಹೂಡಿಕೆ

| ವಿವರ | ಬ್ಯಾಂಕಿನಲ್ಲಿ ಇಟ್ಟಿರುವ ಠೇವಣಿ ಮೊತ್ತ | ಒಟ್ಟು ಮೊತ್ತ |
|---|---|---|
| • **ನಿಶ್ಚಿತ ಠೇವಣಿ ವಿವರ:** | | |
| • ನಿವೃತ್ತ ವೇತನಕ್ಕಾಗಿ ನಿಶ್ಚಿತ ಠೇವಣಿಯಲ್ಲಿರುವ ಮೊತ್ತ | 11,00,00,000 | 53,00,00,000 |
| • ಕಾರ್ಮಿಕರಿಗೆ ಪಾವತಿಯಾಗದ ಅನ್‌ಕ್ಲೇಮ್ಡ್ ಮೊತ್ತವನ್ನು ಕಾರ್ಮಿಕರು ಕ್ಲೈಮ್ ಮಾಡಿದ್ದಲ್ಲಿ ಹಿಂದಿರುಗಿಸಬೇಕಾದ ಮೊತ್ತವನ್ನು ನಿಶ್ಚಿತ ಠೇವಣಿಯಲ್ಲಿಟ್ಟಿರುವ ಮೊತ್ತ | 12,00,00,000 | |
| • ನಿಶ್ಚಿತ ಠೇವಣಿಯ ಮೊತ್ತ | 30,00,00,000 | |

## 2015–16 ನೇ ಸಾಲಿನ ಪ್ರಗತಿ:

(1) ಕಾರ್ಮಿಕರಿಗೆ ಮಂಡಳಿಯ ಯೋಜನೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮದಡಿಯಲ್ಲಿ ಕ್ಯಾಲೆಂಡರ್ ಮತ್ತು ಪತ್ರಿಕಾ ಪ್ರಕಟಣೆಗಳ ಮುಖಾಂತರ ₹. 1,19,950/– ಗಳನ್ನು ವೆಚ್ಚ ಮಾಡಿದೆ.

(2) ಯಶವಂತಪುರದಲ್ಲಿರುವ ಕೇಂದ್ರ ಕಛೇರಿಯ ನೆಲ ಮಹಡಿಯನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮತ್ತಿಕೆರೆ ಮುಖ್ಯರಸ್ತೆ ಶಾಖೆಗೆ ಬಾಡಿಗೆಗೆ ನೀಡಿದೆ ಮತ್ತು ಮೊದಲನೇ ಮಹಡಿಯನ್ನು ಕೇಂದ್ರ ಕಾರ್ಮಿಕ ಶಿಕ್ಷಣ ಮಂಡಳಿಗೆ ಬಾಡಿಗೆಗೆ ನೀಡಿದೆ. 2015–16ನೇ ಸಾಲಿನಲ್ಲಿ ಮಂಡಳಿಗೆ ₹. 31,92,553/– ಬಾಡಿಗೆ ಬಂದಿರುತ್ತದೆ.

(3) ಬೆಂಗಳೂರಿನ ಪೀಣ್ಯದಲ್ಲಿರುವ ಸಮುದಾಯ ಭವನದ 1&2ನೇ ಕಟ್ಟಡವನ್ನು ಆರ್ಟ್ ಆಫ್ ಫ್ಯಾಷನ್ (ಸಿದ್ಧ ಉಡುಪುಗಳ ತಯಾರಿಕಾ ಘಟಕ) ರವರಿಗೆ ಬಾಡಿಗೆಗೆ ನೀಡಲಾಗಿದ್ದು, ₹ 747512/– ಬಾಡಿಗೆ ಬಂದಿರುತ್ತದೆ. ಕಾರ್ಮಿಕರಿಗಾಗಿ ನಿರ್ಮಿಸಲಾಗಿರುವ ಸಮುದಾಯ ಭವನವನ್ನು ರಿಯಾಯತಿ ದರದಲ್ಲಿ ಕಾರ್ಮಿಕರ ಮದುವೆ ಹಾಗೂ ಇತರೆ ಶುಭ ಸಮಾರಂಭಗಳಿಗೆ ಬಾಡಿಗೆ ನೀಡಿದ್ದು, 2015–16ನೇ ಸಾಲಿಗೆ ಬಾಡಿಗೆ ರೂಪದಲ್ಲಿ ಬಂದ ಮೊತ್ತ ₹. 12,61,912/-

(4) ಬಾಪೂಜಿನಗರದಲ್ಲಿ ನಿರ್ಮಿಸಲಾಗಿರುವ ಸಮುದಾಯ ಭವನವನ್ನು ಕಾರ್ಮಿಕರಿಗೆ ರಿಯಾಯತಿ ದರದಲ್ಲಿ ಮದುವೆ ಮತ್ತು ಇತರೆ ಶುಭ ಸಮಾರಂಬಗಳಿಗೆ ಬಾಡಿಗೆಗೆ ನೀಡಲಾಗಿದ್ದು, 2015–16ನೇ ಸಾಲಿಗೆ ಬಾಡಿಗೆ ರೂಪದಲ್ಲಿ ಬಂದ ಮೊತ್ತ ₹. 4,01,000/–.

(5) ವಿಜಯಪುರದಲ್ಲಿ ಸಮುದಾಯ ಭವನ ನಿರ್ಮಿಸಲಾಗಿದ್ದು, 1ನೇ ಮಹಡಿಯನ್ನು ಉಪ ನಿರ್ದೇಶಕರು, ಲೆಕ್ಕ ಪರಿಶೋಧನೆ ಇಲಾಖೆ ರವರಿಗೆ ಹಾಗೂ 2ನೇ ಮಹಡಿಯನ್ನು ಕಾರ್ಮಿಕ ಅಧಿಕಾರಿಗಳು, ಉಪ ವಿಭಾಗ–1&2 ರವರ ಕಛೇರಿಗೆ ಬಾಡಿಗೆಗೆ ನೀಡಲಾಗಿದ್ದು, 2015–16ನೇ ಸಾಲಿಗೆ ಬಂದ ಬಾಡಿಗೆ ಮೊತ್ತ ₹.3,22,451/– ಸಮುದಾಯ ಭವನದಲ್ಲಿ ಇದುವರೆವಿಗೂ ಯಾವುದೇ ಶುಭ ಸಮಾರಂಭಗಳು ನಡೆದಿರುವುದಿಲ್ಲ.

(6) ಬಾಗಲಗುಂಟೆ ಜಮೀನಿನ ನಿವೇಶನದಲ್ಲಿ ಹಿಂದುಸ್ತಾನ್ ಸ್ಟೀಲ್ ಕನ್‌ಸ್ಟ್ರಕ್ಷನ್ ಲಿ, ರವರು ತಾತ್ಕಾಲಿಕವಾಗಿ ನಿರ್ಮಿಸಿಕೊಂಡಿದ್ದ ಶೇಡ್‌ಗಳಿಂದ 2015–16ನೇ ಸಾಲಿಗೆ ಬಂದ ಬಾಡಿಗೆ ಮೊತ್ತ ₹. 54,900/–.

(7) ಬಾಗಲಗುಂಟೆಯ ಮಂಜುನಾಥನಗರದಲ್ಲಿರುವ 30 ಗುಂಟೆ ನಿವೇಶನದಲ್ಲಿ ಸಮುದಾಯ ಭವನ ನಿರ್ಮಿಸುವ ಕಾಮಗಾರಿಗೆ ₹.5,00,00,000/– ಗಳಲ್ಲಿ ಮೊದಲನೆ ಕಂತಾಗಿ 1/3 ಮೊತ್ತ ₹.1,67,00,000/– ಗಳನ್ನು ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ರವರಿಗೆ ಠೇವಣಿ ಕರಿಸಲಾಗಿದೆ. ಹಾಗೂ ಕಾಮಗಾರಿಯನ್ನು ಪ್ರಾರಂಭಿಸಿರುತ್ತಾರೆ.

(8) ಗದಗ ಬೆಟಗೇರಿ ನಗರ ಸಭೆ ವ್ಯಾಪ್ತಿಯ ಸೆಟಲ್‌ಮೆಂಟ್ ಪ್ರದೇಶದಲ್ಲಿ ನಿರ್ಮಿಸಲಾಗಿರುವ ಸಮುದಾಯ ಭವನ ಹಾಗೂ ಕಛೇರಿ ಸಂಕೀರ್ಣ ಕಟ್ಟಡದ ಉದ್ಘಾಟನೆಯಾಗಬೇಕಾಗಿರುತ್ತದೆ.

(9) ಕಾರ್ಮಿಕರು ಹಾಗೂ ಅವರ ಅವಲಂಬಿತರಿಗೆ ಪ್ರಸ್ತುತ ಜಾರಿಯಲ್ಲಿರುವ ಕಲ್ಯಾಣ ಯೋಜನೆಗಳ ಸೌಲಭ್ಯಗಳು, ಕಾರ್ಮಿಕರ ಬ್ಯಾಂಕ್ ಖಾತೆಗೆ ನೇರವಾಗಿ ತಲುಪಲು ಆರ್.ಟಿ.ಜಿ.ಎಸ್. ಮೂಲಕ ಕಳುಹಿಸಲು ಮಂಡಳಿ ಸಭೆಯಲ್ಲಿ ಕೈಗೊಂಡ ತೀರ್ಮಾನದಂತೆ ಜಾರಿಗೆ ತರಲಾಗಿದೆ.

(10) ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯು ಜಾರಿಗೊಳಿಸುತ್ತಿರುವ ಯೋಜನೆಗಳ ಕುರಿತು ಎಲ್ಲಾ ವರ್ಗದ ಅರ್ಹ ಕಾರ್ಮಿಕರಿಗೆ ಮಾಹಿತಿ ತಲುಪಿಸಲು ಕರ್ನಾಟಕ ರಾಜ್ಯಾದ್ಯಂತ ಇರುವ ಜಿಲ್ಲಾಧಿಕಾರಿಗಳ ಕಛೇರಿ ಹಾಗೂ ಇತರೆ 30 ಸ್ಥಳಗಳಲ್ಲಿ ₹.42,95,250/- ಗಳ ವೆಚ್ಚದಲ್ಲಿ ಹೋರ್ಡಿಂಗ್ಸ್‌ಗಳನ್ನು ಅಳವಡಿಸಲಾಗಿದೆ.

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯು, ಕರ್ನಾಟಕ ಸರ್ಕಾರದ ಸಲಹೆ ಮತ್ತು ನಿರ್ದೇಶನಗಳ ಮೇರೆಗೆ ಕಾರ್ಯ ನಿರ್ವಹಿಸುತ್ತಿದೆ.

**ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ಸ್ಥಿರ ಆಸ್ತಿಗಳ ವಿವರ:**

| ಕ್ರ. ಸಂ | ಮಂಡಳಿಯ ಜಮೀನು/ ನಿವೇಶನಸ್ಥಳ ಹಾಗೂ ವಿಳಾಸ | ಸರ್ವೆ ನಂ. | ವಿಸ್ತೀರ್ಣ | ವಿವರ |
|---|---|---|---|---|
| 1. | **ಬೆಂಗಳೂರು.**<br>**ಮಂಡಳಿಯ ಸ್ವಂತ ಕಟ್ಟಡ**<br>ಕಾರ್ಮಿಕ ಕಲ್ಯಾಣ ಕೇಂದ್ರ, ಮತ್ತಿಕೆರೆ ಮುಖ್ಯ ರಸ್ತೆ, ಮಹಾನಗರ ಪಾಲಿಕೆ ಸಂಕೀರ್ಣ ಹಿಂಭಾಗ, ಯಶವಂತಪುರ. | ನಿವೇಶನ ಸಿಟಿ ಸರ್ವೆ ನಂ. 151/2 | ಉತ್ತರಕ್ಕೆ 28 . 60 ಮೀಟರ್ಸ್ ದಕ್ಷಣಕ್ಕೆ 26 . 68 ಮೀಟರ್ಸ್ ಪೂರ್ವಕ್ಕೆ 14 . 70 ಮೀಟರ್ಸ್ ಪಶ್ಚಿಮಕ್ಕೆ 14 . 60 ಮೀಟರ್ಸ್ ನಿವೇಶನದಲ್ಲಿ ಕಟ್ಟಡವಿರುತ್ತದೆ.<br>(3 1/2 ಗುಂಟೆ) | ಬೆಂಗಳೂರಿನ ಯಶವಂತಪುರ, ಮತ್ತಿಕೆರೆ ಮುಖ್ಯ ರಸ್ತೆಯಲ್ಲಿ ಮಂಡಳಿಯ ಪ್ರಧಾನ ಕಛೇರಿಯು 2ನೇ ಮಹಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಒಂದನೇ ಮಹಡಿಯನ್ನು Central Board for Workers Education ರವರಿಗೆ ಹಾಗೂ ನೆಲಮಹಡಿಯನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ರವರಿಗೆ ಬಾಡಿಗೆಗೆ ನೀಡಲಾಗಿದೆ. |
| 2. | **ಬೆಂಗಳೂರು.**<br>2ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಬಾಪೂಜಿನಗರ, ಮೈಸೂರು ರಸ್ತೆ, (ಗಾಳಿ ಆಂಜನೇಯ ದೇವಸ್ಥಾನದ ಹತ್ತಿರ) | ವಾರ್ಡ್ ಸಂ.42 | **ನಿವೇಶನ**<br>ಉತ್ತರ, ದಕ್ಷಿಣ 103 ಅಡಿ, ಪೂರ್ವ, ಪಶ್ಚಿಮ 65 ಅಡಿಯ ನಿವೇಶನದಲ್ಲಿ ಕಟ್ಟಡವಿರುತ್ತದೆ.<br>(103’ X 65’ ಚ.ಅಡಿ) | ಸಮುದಾಯ ಭವನವನ್ನು ಕಾರ್ಮಿಕರು ಹಾಗೂ ಅವರ ಅವಲಂಭಿತರಿಗೆ ಕಡಿಮೆ ದರದಲ್ಲಿ ಮದುವೆ ಸಮಾರಂಭಗಳಿಗೆ ಬಾಡಿಗೆಗೆ ನೀಡಲಾಗುತ್ತಿದೆ. |

| | | | | |
|---|---|---|---|---|
| 3 | **<u>ಬೆಂಗಳೂರು</u>**<br><br>ಬಾಗಲಗುಂಟೆ ಗ್ರಾಮ,<br><br>ದಾಸರಹಳ್ಳಿ ನಗರ ಸಭೆ,ಮಂಜುನಾಥ್ ನಗರ | ಸರ್ವೆ ನಂ. 85 | **<u>ಜಮೀನು</u>**<br><br>**7 ಎಕರೆ 20 ಗುಂಟೆ** | 1. ಬಾಗಲಗುಂಟೆ ಜಮೀನಿನಲ್ಲಿ 30 ಗುಂಟೆ ಜಾಗದಲ್ಲಿ ಸಭಾ ಭವನ/ ಸಮುದಾಯ ಭವನ ನಿರ್ಮಿಸುವ ಕಾಮಗಾರಿಯನ್ನು ಗೃಹ ಮಂಡಳಿಯವರು ಪ್ರಾರಂಭಿಸಿರುತ್ತಾರೆ.<br><br>2) ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರಕ್ಕೆ<br>2 ಎಕರೆ (ನಿರ್ಮಾಣವಾಗಿರುತ್ತದೆ)<br><br>3) ಲೇಬರ್ ರೀಸರ್ಚ್ ಇನ್‌ಸ್ಟಿಟ್ಯೂಟ್<br>2ಎಕರೆ ಜಾಗದಲ್ಲಿ ಕಾಮಗಾರಿ<br>ಪ್ರಾರಂಭಿಸಿರುತ್ತಾರೆ.<br><br>**ಒಟ್ಟು <u>6 ಎಕರೆ 30 ಗುಂಟೆ</u>**<br><br>ಬಾಗಲಗುಂಟೆಯಲ್ಲಿರುವ 7 ಎಕರೆ 20 ಗುಂಟೆ ಜಮೀನಿನಲ್ಲಿ ಉದ್ಯೋಗ ಮತ್ತು ತರಬೇತಿ ಇಲಾಖೆಗೆ ಬಹು ಕೌಶಲ್ಯ ಅಭಿವೃದ್ಧಿ ಕೇಂದ್ರ ನಿರ್ಮಾಣಕ್ಕಾಗಿ 2 ಎಕರೆಯನ್ನು ಉದ್ಯೋಗ ಮತ್ತು ತರಬೇತಿ ಇಲಾಖೆಗೆ ಮತ್ತು ಕಾರ್ಮಿಕ ಸಂಶೋಧನಾ ಕೇಂದ್ರ ಸ್ಥಾಪನೆಗೆ 2 ಎಕರೆ ಜಮೀನನ್ನು ಕಾರ್ಮಿಕ ಇಲಾಖೆಗೆ 30 ವರ್ಷಗಳಿಗೆ ಗುತ್ತಿಗೆಗೆ ನೀಡಲಾಗಿದೆ. |
| 4. | **<u>ಬೆಂಗಳೂರು.</u>**<br><br>**<u>ಸಮುದಾಯ ಭವನ</u>**<br><br>1ನೇ ಹಂತ, ಪೀಣ್ಯ,<br><br>11 ನೇ ವಾರ್ಡ್,<br><br>ಬೆಂಗಳೂರು ಮಹಾನಗರ ಪಾಲಿಕೆ,<br><br>ತುಮಕೂರು ರಸ್ತೆ, | ನಿವೇಶನ ಸಂ.29 ರ (ಹೊಸದು. 4-1) | **<u>ನಿವೇಶನ</u>**<br><br>ಪೂರ್ವ 27-30 ಮೀ<br><br>ಪಶ್ಚಿಮ 24-90 ಮೀ<br><br>ದಕ್ಷಿಣ 21-60 ಮೀ<br><br>ಉತ್ತರ 24-80 ಮೀ<br><br>(80` X 90`ಚ.ಅಡಿ) | ಪೀಣ್ಯದ 1ನೇ ಹಂತದಲ್ಲಿರುವ ಸಮುದಾಯ ಭವನ ಕಛೇರಿ ಸಂಕೀರ್ಣ ಕಟ್ಟಡದಲ್ಲಿ 2 ಮತ್ತು 3ನೇ ಮಹಡಿಯನ್ನು ಸ್ಟೈಲ್ ಆರ್ಟ್ ಇಂಡಿಯಾ ಅಪೆರೆಲ್ಸ್ ಪ್ರೈ.ಲಿ., ರವರಿಗೆ ಸಿದ್ಧ ಉಡುಪುಗಳ ತಯಾರಿಕ ಘಟಕಕ್ಕೆ ಬಾಡಿಗೆಗೆ ನೀಡಲಾಗಿದೆ.<br><br>ಸಮುದಾಯ ಭವನವನ್ನು ಕಾರ್ಮಿಕರು ಹಾಗೂ ಅವರ ಅವಲಂಭಿತರಿಗೆ ಕಡಿಮೆ ದರದಲ್ಲಿ ಮದುವೆ ಸಮಾರಂಭಗಳಿಗೆ ಬಾಡಿಗೆಗೆ ನೀಡಲಾಗುತ್ತಿದೆ. |

| | | | | |
|---|---|---|---|---|
| 5. | **ಮಂಡ್ಯ ಜಿಲ್ಲೆ.**<br>ಹೊಂಗಳ್ಳಿ ಗ್ರಾಮ, ಬೆಳಗೊಳ ಪಂಚಾಯಿತಿ, ಶ್ರೀರಂಗಪಟ್ಟಣ ತಾ: | ಸರ್ವೆ ನಂ. 341 | **ಜಮೀನು**<br>**4 ಎಕರೆ** | **ಮಂಡಳಿಗೆ ಸೇರಿದ 4 ಎಕರೆ ಜಮೀನು:** ಹೊಂಗಳ್ಳಿ ಗ್ರಾಮ ಕೆ.ಆರ್.ಎಸ್. ಬಳಿಯಿದ್ದು ಅದರ ಸುತ್ತಲೂ ಮುಳ್ಳುತಂತಿ ನಿರ್ಮಿಸಿ ಪಿ.ಡಬ್ಲ್ಯೂ.ಡಿ. ರವರಿಂದ ವಾಚ್‌ಮೆನ್ ಶೆಡ್ ನಿರ್ಮಿಸಲಾಗಿದೆ. 84ನೇ ಮಂಡಳಿ ಸಭೆಯಲ್ಲಿ 1ಎಕರೆ ಜಾಗದಲ್ಲಿ ಸಮುದಾಯ ಭವನದ ಜೊತೆ ಅತಿಥಿ ಗೃಹವನ್ನು ನಿರ್ಮಿಸುವ ಬಗ್ಗೆ ನಿರ್ಣಯಿಸಿದೆ. |
| 6. | **ಚಿತ್ರದುರ್ಗ ಜಿಲ್ಲೆ**<br>ವಾಣಿ ವಿಲಾಸಪುರ ಗ್ರಾಮ, (ವಾಣಿ ವಿಲಾಸ ಸಾಗರದ ಪಕ್ಕ) ಹಿರಿಯೂರು ತಾ: | ಸರ್ವೆ ನಂ. 22.2 | **ಜಮೀನು**<br>**3.30 ಗುಂಟೆ** | ವಾಣಿವಿಲಾಸಪುರ ಹಿರಿಯೂರಿನಲ್ಲಿ ಮಂಡಳಿಯ 3 ಎಕರೆ 30 ಗುಂಟೆ ಜಮೀನಿನ ಅರ್ಧ ಭಾಗಕ್ಕೆ L ಆಕಾರದಲ್ಲಿ ಮುಳ್ಳಿ ತಂತಿ ಬೇಲಿ ಹಾಕುವ ಕಾಮಗಾರಿ ಪೂರ್ಣಗೊಂಡಿರುತ್ತದೆ. |
| 7. | **ವಿಜಯಪುರ.**<br>ನಂ. 1294/1ಎ<br>ವಾರ್ಡ್ ನಂ.6,<br>ಸಿಂಧಗಿ ರಸ್ತೆ– ರಾಂಪುರ ರಸ್ತೆ. | ನಿವೇಶನ ಸಂ. ಸಿಟಿಎಸ್. 1294/1ಎ | **ನಿವೇಶನ**<br>ಪೂರ್ವಕ್ಕೆ 100 ಅಡಿಗಳು<br>ಪಶ್ಚಿಮಕ್ಕೆ 80 ಅಡಿಗಳು<br>ಉತ್ತರಕ್ಕೆ 279 ಅಡಿಗಳು<br>ದಕ್ಷಿಣಕ್ಕೆ 289 ಅಡಿಗಳು<br>(0.20 ಗುಂಟೆ) | ವಿಜಯಪುರದಲ್ಲಿ ಸಮುದಾಯ ಭವನ ಹಾಗೂ ಕಛೇರಿ ಸಂಕೀರ್ಣ ಕಟ್ಟಡದಲ್ಲಿ 1 ಮತ್ತು 2ನೇ ಮಹಡಿಯನ್ನು ಬಾಡಿಗೆಗೆ ನೀಡಲಾಗಿದೆ. ಸಮುದಾಯ ಭವನವನ್ನು ಕಾರ್ಮಿಕರು ಮತ್ತು ಅವರ ಅಲಭಿತರಿಗೆ ರಿಯಾಯತಿ ದರದಲ್ಲಿ ಬಾಡಿಗೆಗೆ ನೀಡಲಾಗುವುದು. |

| | | | | |
|---|---|---|---|---|
| 8. | **ದಾವಣಗೆರೆ**<br>ಸೈಟ್ ನಂ. 6, (ಲೇಬರ್ ಕಾಲೋನಿ) ನಿಟ್ಟುವಳ್ಳಿ ರಸ್ತೆ, ದಾವಣಗೆರೆ | ನಿವೇಶನ ಸಂ.6<br>ಡಿವಿಜನ್ ನಂ. 7 ಡೋರ್ ನಂ. 920/10<br>920/11, 920/12 | 12–15 ಮೀ. ಉದ್ದ,<br>(30 X 40 ಅಡಿ)<br>9 ಮೀಟರ್ ಅಗಲದ ನಿವೇಶನ ವಾಗಿರುತ್ತದೆ.<br>(30` X 40`ಚ.ಅಡಿ)<br>**ಕಟ್ಟಡ**<br>ಉತ್ತರ Xದಕ್ಷಿಣ 23ಅಡಿ<br>ಪೂರ್ವ X ಪಶ್ಚಿಮ 22 1/2 ಅಡಿಯ ನಿವೇಶನದಲ್ಲಿ ಕಟ್ಟಡವಿರುತ್ತದೆ.<br>(30` X 40`ಅಡಿ)ನಿವೇಶನ | ಕಾರ್ಮಿಕ ಕಲ್ಯಾಣ ಕೇಂದ್ರದ ಕಟ್ಟಡವನ್ನು ಬಾಡಿಗೆಗೆ ನೀಡಲಾಗಿದೆ. |
| 9. | **ಉತ್ತರ ಕನ್ನಡ ಜಿಲ್ಲೆ**<br>ದಾಂಡೇಲಿ ನಗರಸಭೆ,<br>ದಾಂಡೇಲಿ ನಗರ | ಡಿವಿಜನ್ ನಂ.1 ಆಸ್ತಿ ಸಂ. 1/767 | ಪಶ್ಚಿಮಕ್ಕೆ 275 ಅಡಿ ದಕ್ಷಿಣಕ್ಕೆ 108 ಅಡಿ ಪೂರ್ವಕ್ಕೆ 239 ಅಡಿ, ಉತ್ತರಕ್ಕೆ 42 ಅಡಿಗಳುಳ್ಳ (18 ಗುಂಟೆ) ನಿವೇಶನದಲ್ಲಿ ಹಳೆಯ ಕಟ್ಟಡ ವಿರುತ್ತದೆ. | ದಾಂಡೇಲಿ ನಿವೇಶನದಲ್ಲಿ ಶಿಥಲಾವಸ್ಥೆಯಲ್ಲಿರುವ ಹಳೆ ಕಟ್ಟಡವನ್ನು ಕೆಡವಿ 18 ಗುಂಟೆ ಜಾಗದಲ್ಲಿ ಸುಸಜ್ಜಿತವಾದ ಸಮುದಾಯ ಭವನ ಹಾಗೂ ಕಛೇರಿ ಸಂಕೀರ್ಣ ನಿರ್ಮಿಸುವ ಬಗ್ಗೆ 84ನೇ ಮಂಡಳಿ ಸಭೆಯಲ್ಲಿ ನಿರ್ಣಯಿಸಲಾಗಿದೆ. |
| 10. | **ಮೈಸೂರು.**<br>ಕೆಸರೆ ಕಾಲೋನಿ, ರಾಜೇಂದ್ರನಗರ 7ನೇ ಕ್ರಾಸ್, (ಲಸ್ಕರ್ ಮೊಹಲ್ಲಾ) ಎನ್.ಆರ್.ಮೊಹಲ್ಲಾಮೈಸೂರು. | ಬ್ಲಾಕ್/ ಮನೆ ಸಂ. 53 | ಉತ್ತರ X ದಕ್ಷಿಣ 93 ಅಡಿ.<br>ಪೂರ್ವ X ಪಶ್ಚಿಮ 42ಅಡಿ<br>ಈ ವಿಸ್ತೀರ್ಣದ ಜಾಗದಲ್ಲಿ ಕಲ್ಯಾಣ ಕೇಂದ್ರದ ಕಟ್ಟಡವನ್ನು ನಿರ್ಮಿಸಲಾಗಿದೆ. | ಕಾರ್ಮಿಕ ಕಲ್ಯಾಣ ಕೇಂದ್ರ ಕಟ್ಟಡವಿರುತ್ತದೆ. |
| 11. | **ಗದಗ**<br>ಗದಗ–ಬೆಟಗೇರಿ ಸೆಟ್ಲ್‌ಮೆಂಟ್ ಏರಿಯಾ, ಗದಗ ನಗರ ಸಭೆ | ಸಿ.ಟಿ.ಎಸ್ ಸಂ. 4012/133 ಜಮೀನಿನಲ್ಲಿ 1360 ಅಡಿ | 20 ಗುಂಟೆ ಜಮೀನು/ನಿವೇಶನ<br>ಹಂಚಿನ ಹಳೆ ಕಟ್ಟಡ ಗೋಡೆಗಳು ಶಿಥಿಲಗೊಂಡು ಗೋಡೆ | ಗದಗದಲ್ಲಿ ನಿರ್ಮಿಸಲಾಗಿರುವ ಸಮುದಾಯ ಭವನ ಹಾಗೂ ಕಛೇರಿ ಸಂಕೀರ್ಣದ ಕಟ್ಟಡವು ಉದ್ಘಾಟನೆಯಾಗಬೇಕಾಗಿರುತ್ತದೆ. |

| | | | | |
|---|---|---|---|---|
| | ವ್ಯಾಪ್ತಿ, | | ಬಿರುಕುಬಿಟ್ಟು ಬೀಳುವ ಸ್ಥಿತಿಯಲ್ಲಿದೆ. | |
| 12. | **ರಾಯಚೂರು**<br>ನೀಲಕಂಠೇಶ್ವರನಗರ,. | ಸರ್ವೆ ನಂ. 852/2 | 23 ಗುಂಟೆ ನಿವೇಶನದಲ್ಲಿ ಮಂಡಳಿಗೆ ಸೇರಿದ ಹಳೆಯ ಕಟ್ಟಡವಿರುತ್ತದೆ. | ರಾಯಚೂರಿನಲ್ಲಿರುವ 23 ಗುಂಟೆ ನಿವೇಶನದಲ್ಲಿ ಸಮುದಾಯ ಭವನ ಹಾಗೂ ಕಛೇರಿ ಸಂಕೀರ್ಣದ ಕಟ್ಟಡ ನಿರ್ಮಿಸಲು 84ನೇ ಮಂಡಳಿ ಸಭೆಯಲ್ಲಿ ನಿರ್ಣಯಿಸಿದೆ. |
| 13. | **ತುಮಕೂರು**<br>ತುಮಕೂರಿನ ದೇವರಾಯ ಪಟ್ಟಣದಲ್ಲಿರುವ ನಿವೇಶನ | ಸರ್ವೆ ನಂ.72/1ಬಿ, 72/1ಬಿ, 72/2ಬಿ | ನಿವೇಶನ<br>17.68 X 30.48 ಮೀಟರ್ ಅಳತೆಯ (58'X100"ಚ.ಅ) | ಸಮುದಾಯ ಭವನವನ್ನು ನಿರ್ಮಿಸಲು ಗೃಹ ಮಂಡಳಿಯಿಂದ ನೀಲಿ ನಕ್ಷೆ ಹಾಗೂ ಅಂದಾಜು ದರಪಟ್ಟಿ ಪಡೆಯಲು ಕೋರಲಾಗಿತ್ತು. ಸದ್ಯ ಸ್ಥಗಿತಗೊಳಿಸಲಾಗಿದೆ. |

## 2015–16ನೇ ಸಾಲಿನ ಮಂಡಳಿಯ ಸಾಧನೆಗಳು

1) ಕಾರ್ಮಿಕರಿಂದ ಹಾಗೂ ಮಾಲೀಕರಿಂದ ಬರುವ ವಂತಿಕೆ, ಕ್ರೋಢೀಕರಣ ವಿವರಗಳಿಗೆ ತಂತ್ರಾಂಶ ಅಳವಡಿಸಿ ಪೂರ್ಣ ಗಣಕೀಕರಣಗೊಳಿಸಿದೆ.

2) ಕಾರ್ಖಾನೆ ಮತ್ತು ಬಾಯ್ಲರ್‌ಗಳ ಇಲಾಖೆಯಲ್ಲಿ ಒಟ್ಟು 13,200 ಕಾರ್ಖಾನೆ, ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು ನೊಂದಣಿಯಾಗಿದ್ದು ಇವುಗಳಲ್ಲಿ ಕಾರ್ಮಿಕ ಕಲ್ಯಾಣ ನಿಧಿಗೆ 2015–16ನೇ ಸಾಲಿನಲ್ಲಿ 19314 ಸಂಸ್ಥೆಗಳು ಒಟ್ಟು ⍰. 5,94,43,470/– ಗಳ ವಂತಿಕೆ ಸಂದಾಯ ಮಾಡಿರುತ್ತದೆ.

3) ಸಾರ್ವಜನಿಕರಿಗೆ ಮಾಹಿತಿಯನ್ನು ಮಾಹಿತಿ ಹಕ್ಕು ಅಧಿನಿಯಮ 2005 ರ ಪ್ರಕಾರ, ನೀಡಲಾಗುತ್ತಿದ್ದು, ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಬಗ್ಗೆ ಮಾಹಿತಿಯನ್ನು ಕೆಳಕಂಡ ವೆಬ್ ಸೈಟ್‌ನಲ್ಲಿ ಅಳವಡಿಸಿದೆ.
   (ಅ) ಅಂತರ್ ಜಾಲ ತಾಣದ ವಿಳಾಸ: (**website address**): www.klwb-kar.com ಹಾಗೂ
   (ಆ) ವಿದ್ಯುನ್ಮಾನದ ಸಂದೇಶ ವಿಳಾಸ (**e-mail address**): welfare commissioner123@ gmail.com

4) ಆರ್.ಟಿಜಿ.ಎಸ್. (RTGS) ಕಾರ್ಮಿಕರಿಗೆ ಯೋಜನೆಗಳ ಸೌಲಭ್ಯಗಳನ್ನು ನೇರವಾಗಿ ತಲುಪಲು ಎಸ್.ಬಿ. ಎಂ. ಬ್ಯಾಂಕ್ ಮತ್ತಿಕೆರೆ ಶಾಖೆಯಲ್ಲಿ ಖಾತೆ ತೆರೆದು ಆರ್.ಟಿ.ಜಿ.ಎಸ್. ಮೂಲಕ ಜಮಾ ಮಾಡುವ ಕ್ರಮ ಕೈಗೊಳ್ಳಲಾಗಿದೆ.

5) ಕರ್ನಾಟಕ ರಾಜ್ಯದಲ್ಲಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯು ಜಾರಿಗೊಳಿಸುತ್ತಿರುವ ಯೋಜನೆಗಳ ಕುರಿತು ಎಲ್ಲಾ ವರ್ಗದ ಅರ್ಹ ಕಾರ್ಮಿಕರಿಗೆ ಮಾಹಿತಿ ತಲುಪಿಸಲು ಕರ್ನಾಟಕ ರಾಜ್ಯಾದ್ಯಂತ ಇರುವ ಜಿಲ್ಲಾಧಿಕಾರಿಗಳ ಕಛೇರಿ ಹಾಗೂ ಇತರೆ 30 ಸ್ಥಳಗಳಲ್ಲಿ ⍰.42,95,250/– ಗಳ ವೆಚ್ಚದಲ್ಲಿ ಹೋರ್ಡಿಂಗ್ಸ್‌ಗಳನ್ನು ಅಳವಡಿಸಲಾಗಿದೆ.

6) ಈ ಮಂಡಳಿಯು ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆಯಾಗಿದ್ದು, ಮಂಡಳಿಯು, ಕಾರ್ಯಕ್ರಮಗಳನ್ನು ಕಾರ್ಮಿಕರಿಗೆ/ಅವಲಂಬಿತರಿಗೆ ಮುಟ್ಟಿಸುವಲ್ಲಿ ಯಶಸ್ವಿಯಾಗಿದೆ.

ಮಂಡಳಿಯು, ಮೇಲಿನ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವಲ್ಲಿ ವಂತಿಗೆ ಹಾಗೂ ಸರ್ಕಾರ ನೀಡುವ ಅನುದಾನದೊಂದಿಗೆ, ಕಾರ್ಮಿಕರ ಕಲ್ಯಾಣಕ್ಕಾಗಿ ಪರಿಣಾಮಕಾರಿ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಕಾರ್ಮಿಕರು, ಸಮಾಜದಲ್ಲಿ ತಮ್ಮ ಜೀವನವನ್ನು ಸುಭದ್ರವಾಗಿ ನಡೆಸಲು ಮಂಡಳಿ ತನ್ನ ರಚನೆಯ ಮೂಲ ಧ್ಯೇಯ ಮತ್ತು ತತ್ವದಂತೆ, ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ಸರ್ಕಾರಕ್ಕೆ ಸಹಯೋಗ ನೀಡುವ ಕಾರ್ಯವನ್ನು ಸಹ ನಿರ್ವಹಿಸುತ್ತಿದೆ.

**ಕಲ್ಯಾಣ ಆಯುಕ್ತರು.**
**ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ,**
**ಯಶವಂತಪುರ, ಬೆಂಗಳೂರು–22.**